ಜ್ಯೋತಿಕಾರ್ಯದ ವಾರ್ತಾಪತ್ರ



ಮಹರ್ಷಿ ಅಮರ (1919-1982)

ಋಷಿಗಳು ಹೇಳಿಕೊಟ್ಟಂತೆ
ನಾವು ಧ್ಯಾನವನ್ನು ಕಲಿಸುತ್ತೇವೆ.

### ಬೆಳಕು

ಈ ಎಲ್ಲ ಸೃಷ್ಟಿಯ ಹಿಂದಿರುವ ಮಹಾನ್ ಶಕ್ತಿ. ಬೆಳಕು ಸಾಕ್ಷಾತ್ ದೇವರು.

### ಜ್ಯೋತಿಕಾರ್ಯ

ಎಲ್ಲ ಜೀವಜಾಲಕ್ಕೆ ತನ್ನ ಅರಿವು ಮತ್ತು ಅನುಭವಗಳ ಮಟ್ಟವನ್ನು ಮೇಲೇರಿಸಿ ಉತ್ತಮವಾಗಿ ಬದುಕಲು ನೆರವಾಗುವುದು.

### ಜ್ಯೋತಿಜೀವಿಗಳು

ಇಲ್ಲಿ ಮತ್ತು ಮೇಲಿನ ಲೋಕಗಳಲ್ಲಿ ಜೀವಿಸುತ್ತ, ಜ್ಞಾನ ಮತ್ತು ಚೈತನ್ಯಗಳ ಬೆಳಕನ್ನು ಸಂಗ್ರಹಿಸಿ ಹರಡುತ್ತಿರುವ ಋಷಿಗಳು.

### ಸಪ್ತಋಷಿಗಳು

ಎಲ್ಲ ಜೀವಜಾಲಕ್ಕೆ ಇಲ್ಲಿ ಶಾಂತಿ ಪರಿಪೂರ್ಣತೆಗಳೊಂದಿಗೆ ಜೀವಿಸುವ ದಾರಿ ತೋರಿಸಿ, ಕೊನೆಗೆ ತಮ್ಮ ಮೂಲವಾದ ಬೆಳಕಿಗೆ ಮಾರ್ಗದರ್ಶಿಸಲು ಆಯ್ಕೆಗೊಂಡಿರುವ ಮಹಾತ್ಮರು.

### ಮಹರ್ಷಿ ಅಮರ

ಸಪ್ತಋಷಿಗಳೊಂದಿಗೆ ನೇರಸಂಪರ್ಕವಿದ್ದ, ಹೊಸ ಯುಗದ ಉನ್ನತಬದುಕಿಗೆ ಅಗತ್ಯವಾದ ಜ್ಞಾನ ಮತ್ತು ಸೂಚನೆಗಳನ್ನು ಕೆಳತಂದ ಒಬ್ಬ ಮಹಾನ್ ಗುರುವಾಗಿದ್ದರು.

### ಗುರೂಜಿ ಕೃಷ್ಣಾನಂದ

ಮಹರ್ಷಿ ಅಮರರ ನೇರ ಶಿಷ್ಯರು. ಅವರು ಋಷಿಗಳ ಮಾರ್ಗವಾದ ಧ್ಯಾನಯೋಗವನ್ನು ಬೆಳೆಸಿ, ತಪೋನಗರದಲ್ಲಿ ಸಪ್ತಋಷಿಗಳ ಆಧ್ಯಾತ್ಮಿಕ ಕೇಂದ್ರವನ್ನು ಸ್ಥಾಪಿಸಿದರು.

### ಸಪ್ತಋಷಿ ಧ್ಯಾನಯೋಗ

ಋಷಿಗಳ ಮಾರ್ಗದರ್ಶನದಲ್ಲಿ ರೂಪುಗೊಂಡಿರುವ, ಧ್ಯಾನ ಮತ್ತು ನಮ್ಮ ಭಾವನೆ-ಆಲೋಚನೆಗಳನ್ನು ಉತ್ತಮಗೊಳಿಸಿಕೊಳ್ಳುವ ಮೂಲಕ ನಮ್ಮ ಲೌಕಿಕ ಮತ್ತು ಆಧ್ಯಾತ್ಮಿಕ ಬದುಕುಗಳನ್ನು ಸಮರ್ಪಕವಾಗಿ ಜೀವಿಸಲು ನೆರವಾಗುವ ಒಂದು ವಿನೂತನ ಆಧ್ಯಾತ್ಮಿಕ ಮಾರ್ಗ.

### ಪ್ರಮಾಣಗಳು

★ ನಾವೆಲ್ಲರೂ ಒಂದು ಮಹಾ ಜ್ಯೋತಿಯ (ದೇವರ) ಕಣಗಳು.
★ ಪ್ರೀತಿ ನಮ್ಮ ಸ್ವಭಾವ.
★ ಮೌನ ನಮ್ಮ ಭಾಷೆ.
★ ಧ್ಯಾನ ನಮ್ಮ ಮಾರ್ಗ.
★ ಈ ಪ್ರಪಂಚ ನಮ್ಮ ಆಶ್ರಮ.
★ ಇಡೀ ಸೃಷ್ಟಿಯೇ ನಮ್ಮ ಕುಟುಂಬ.

# ತಪೋವಾಣಿ

ಸಂಪುಟ 15 ಸಂಚಿಕೆ 2 ಫೆಬ್ರುವರಿ 2018 ರೂ.25

## ಅನಿಸಿಕೆಗಳು

### ಗುರೂಜಿ ಕೃಷ್ಣಾನಂದ

ಅನು: ಚಂಪ

(ಹಿಂದಿನ ವಾರ್ತಾಪತ್ರಗಳಿಂದ ಆಯ್ದ ಭಾಗಗಳು – ಜನವರಿ 1996ರ ಸಂಚಿಕೆ)

ಒಂದು ದಿನ ನಾನು ನನ್ನ ದ್ವಿಚಕ್ರವಾಹನದಲ್ಲಿ ಹೋಗುತ್ತಿದ್ದಾಗ ತುಂಬಾ ಅಸಾಮಾನ್ಯ ದೃಶ್ಯವನ್ನು ನೋಡಿದೆ. ಒಂದು ನಾಯಿಯು ವೇಗವಾಗಿ ಹೋಗುತ್ತಿದ್ದ ಲಾರಿಯೊಂದಕ್ಕೆ ಬಡಿದು ರಕ್ತದ ಮಡುವಿನಲ್ಲಿ ಸತ್ತುಬಿದ್ದಿತ್ತು. ಅದರ ಸಣ್ಣ ಮರಿಯು ತನ್ನ ತಾಯಿ ಏಳುವುದನ್ನು ಕಾಯುತ್ತ ಕುಳಿತಿತ್ತು! ತನ್ನ ತಾಯಿ ಮತ್ತೆಂದೂ ಎದ್ದು ಬರುವುದಿಲ್ಲವೆಂದು ಅದಕ್ಕೆ ನಿಜವಾಗಿಯೂ ತಿಳಿದಿರಲಿಲ್ಲವೆ? ಅದು ಎಷ್ಟು ಹೊತ್ತು ಕಾದೀತು? ಈಗ ಅದರ ಭಾವನೆಗಳೇನು? ಈ ಯೋಚನೆಗಳು ಮತ್ತು ನನ್ನಾಳದಿಂದ ಬಂದ ಇನ್ನಿತರ ಯೋಚನೆಗಳು ನನ್ನಲ್ಲಿ ಹೇಳಲಾಗದ ವೇದನೆಯನ್ನುಂಟುಮಾಡಿದವು. ನನ್ನ ಮನಸ್ಸಿನಲ್ಲಿ ಆ ದೃಶ್ಯವು ಅಚ್ಚೊತ್ತಿದಂತಿದೆ.

ಇತ್ತೀಚೆಗೆ ನಗರದಲ್ಲಿ ಮುಷ್ಕರವಿದ್ದುದರಿಂದ ಬಸ್ಸುಗಳು ಓಡಾಡುತ್ತಿರಲಿಲ್ಲ. ಮತ್ತೆ ನಾನು ದ್ವಿಚಕ್ರವಾಹನದಲ್ಲಿ ಹೋಗುತ್ತಿದ್ದಾಗ ಬಸ್ ನಿಲ್ದಾಣದಲ್ಲಿ ಕಾಯುತ್ತಿದ್ದ ಸಣ್ಣ ಗುಂಪೊಂದನ್ನು ಕಂಡೆ. ಬರದಿರುವ ಬಸ್ಸಿಗಾಗಿ ಕಾಯುವುದು! ಅವರೇಕೆ ಕಾಯುತ್ತಿದ್ದಾರೆ? ಒಂದೂ ಬಸ್ ಬರುವುದಿಲ್ಲವೆಂದು ಅವರಿಗೆ ತಿಳಿದಿಲ್ಲವೆ! ಅವರು ಕಾಯಲು ಕಾರಣವೇನು! ಅದು ಭರವಸೆಯೇ ಆಗಿದ್ದರೆ ಎಂತಹ ವಿಚಿತ್ರ!

ನಮ್ಮ ಹೃದಯದಾಳದಲ್ಲಿ ಭರವಸೆ ಇರುತ್ತದೆ, ಕೆಲವೊಮ್ಮೆ ಅದು ಎಷ್ಟೇ ಮೂರ್ಖತನದ್ದೆಂದು ಕಂಡುಬಂದರೂ. ಅದೆಂದೂ ಅಳಿಯುವುದಿಲ್ಲ. ಭೂಕಂಪಗಳು, ಪ್ರವಾಹಗಳು, ಯುದ್ಧಗಳು, ಕಗ್ಗೊಲೆಗಳು, ಹಿಂಸಾಚಾರ ಮುಂತಾದವು ಈ ಭರವಸೆಯನ್ನು ಅಳಿಸಲಾರವು. ಭರವಸೆಯಿಲ್ಲದೆ ಮುಂದಿನ ನಾಗರಿಕತೆಗಳನ್ನು ಮತ್ತು ಜೀವನವನ್ನು ಕಟ್ಟಲು ಸಾಧ್ಯವಿಲ್ಲ.

ನಾನು ಈ ದಿಶೆಯಲ್ಲಿ ಯೋಚಿಸುತ್ತಿರುವಾಗ ನನ್ನ ಗಮನವು ಜೀವನದ ಬಗ್ಗೆ ನಿರಂತರವಾಗಿ ಗೊಣಗುತ್ತಿರುವವರ, ಶಪಿಸುತ್ತಿರುವವರ ಮತ್ತು ದೂರುತ್ತಿರುವವರ ನೆನಪಾಯಿತು. ಶಾಂತರೀತಿಯಲ್ಲಿ ಬದುಕುವ ಮತ್ತು ಬದುಕನ್ನು ಬೆಳಗಿಸುವ ಅತ್ಯುತ್ತಮ ಅವಕಾಶಗಳು ಅವರಲ್ಲಿ ಯಾವುದೇ ಖುಷಿಯನ್ನು ಅಥವಾ ನಗುವನ್ನು ತರುವುದಿಲ್ಲ. ಅವರು ಗೋಳು ಮತ್ತು ದುಃಖವನ್ನು ಹುಡುಕುತ್ತಿರುತ್ತಾರೆ, ಬಹುಶಃ ಸಂಕಟವನ್ನೇ ಸುಖಿಸುತ್ತಾರೇನೋ! ಅವರಿಗೆ ಯಾವುದೂ ತೃಪ್ತಿ ಕೊಡುವುದಿಲ್ಲ; ಜೀವನವು ಸದಾ ತನ್ನೆದೆಯಲ್ಲಿ ಹೊತ್ತಿರುವ ಪ್ರೀತಿ ಮತ್ತು ಆನಂದದ ಸುಮಧುರ ಕ್ಷಣಗಳನ್ನು ಆಸ್ವಾದಿಸಲು ಅವರಿಗೆ ಯಾವುದೂ ಸ್ಫೂರ್ತಿ ಕೊಡುವುದಿಲ್ಲ.

ನಾಯಿಮರಿ ಎದ್ದು ಹೋಗಬಹುದು, ನಂತರವೂ ತಾಯಿಗಾಗಿ ಕಾಯುತ್ತಿರಬಹುದು. ಆ ನಾಯಿಮರಿಗಾಗಿ ನಾನು ಕಣ್ಣೀರಿಡುತ್ತೇನೆ ಹಾಗೂ ಭರವಸೆ ಮತ್ತು ಜೀವನವನ್ನು ಗೌರವಿಸುತ್ತೇನೆ.

ನನ್ನ ಮನಸ್ಸಿನಲ್ಲಿ ನೆಲೆನಿಂತ ಇನ್ನೊಂದು ದೃಶ್ಯದ ನೆನಪಾಗುತ್ತದೆ. ಎರಡು ಎತ್ತುಗಳು ಪ್ರಯಾಸದ ಪ್ರಯಾಣದ ನಂತರ ನಿಂತು ವಿಶ್ರಮಿಸಿಕೊಳ್ಳುತ್ತಿದ್ದವು. ನಂತರ ಒಂದು ಇನ್ನೊಂದರ ಬಳಿ ಸಾರಿ ಅದರ ಕುತ್ತಿಗೆಯನ್ನು ನೆಕ್ಕಲಾರಂಭಿಸಿತು, ಖಂಡಿತವಾಗಿ, ಅದರ ನೋವನ್ನು ನೀಗಿಸಲೆಂದು. ಇನ್ನೊಂದಕ್ಕೆ ಅಲ್ಲಿ ನೋವಿದೆಯೆಂದು ಇದಕ್ಕೆ ಹೇಗೆ ತಿಳಿಯಿತು! ಇನ್ನೊಂದು ಹೇಗೆ ಸಂಭಾಷಿಸಿತು? ನೆಕ್ಕಿ ನೋವನ್ನು ನೀಗಿದ ಹಸುವಿನಿಂದ ಎಂತಹ ಒಲವಿನ ಭಾವಾಭಿನಯ!

ಜನರು ಇತರರನ್ನು ದ್ವೇಷದಿಂದ ಮತ್ತು ಹಿಂಸಾಭಾವದಿಂದ ಕಂಡಾಗ ನನಗೆ ಆ ಎತ್ತುಗಳ ನೆನಪಾಗುತ್ತದೆ; ಪ್ರೀತಿಯೇ ಮೈವೆತ್ತ ದೃಶ್ಯ. ಪ್ರೀತಿಯಿದ್ದಲ್ಲಿ ಜೀವನವಿದೆ, ದೈವತ್ವವಿದೆ. ಎಲ್ಲಾ ಧ್ಯಾನಗಳು ನಮ್ಮನ್ನು ಪ್ರೀತಿ, ಜೀವನ ಮತ್ತು ದೈವತ್ವದೆಡೆಗೆ ಕರೆದೊಯ್ಯುತ್ತವೆ.

ಜನವರಿ ತಿಂಗಳು ಶುಭಾಶಯ, ಮಮತೆ ಮತ್ತು ಮಂದಹಾಸಗಳಿಂದ ಕೂಡಿತ್ತು. ಹಾಗೂ ಹಿಂದೊಮ್ಮೆ ನನ್ನನ್ನು ಮಗನಂತೆ ಕಂಡು ಇನ್ನೂ ನೆನಪಿಟ್ಟುಕೊಂಡಿರುವ ಶ್ರೀಮತಿ ಅಮರರವರಿಂದ ವಿಶೇಷ ಆಶೀರ್ವಾದವೂ ದೊರೆತಿತ್ತು. ■

ಮಾನಸ ಫೌಂಡೇಶನ್ (ರಿ)
ತಪೋನಗರ, ಚಿಕ್ಕಗುಬ್ಬಿ, (ಹೆಣ್ಣೂರು-ಬಾಗಲೂರು ರೋಡ್) ಬೆಂಗಳೂರು ಅರ್ಬನ್ - 560077. ಭಾರತ.
✆ 99000 75280 (ಬೆಳಗ್ಗೆ 10ರಿಂದ ಸಂಜೆ 5)
ಇ-ಮೇಲ್: info@lightagemasters.com ವೆಬ್‌ಸೈಟ್: www.lightagemasters.com

## ಧ್ಯಾನದ ತರಗತಿಗಳು

### ತಪೋನಗರದಲ್ಲಿ

**ಭಾನುವಾರ** (ಬೆಳಿಗ್ಗೆ 10 ರಿಂದ 11 ಘಂ.)

### ಬೆಂಗಳೂರು ನಗರದಲ್ಲಿ

**ಭಾನುವಾರ** (ಬೆಳಿಗ್ಗೆ 7 ರಿಂದ 8 ಘಂ.)
ಆಂಜನೇಯ ದೇವಸ್ಥಾನ,
ಮಹಾಲಕ್ಷ್ಮೀ ಲೇಔಟ್

**ಸೋಮವಾರ** (ಸಂಜೆ 7 ರಿಂದ 8 ಘಂ.)
ಆಂಜನೇಯ ದೇವಸ್ಥಾನ,
ಮಹಾಲಕ್ಷ್ಮೀ ಲೇಔಟ್

**ಮಂಗಳವಾರ** (ಸಂಜೆ 7 ರಿಂದ 8 ಘಂ.)
ಶ್ರೀ ಅರಬಿಂದೊ ಕಾಂಪ್ಲೆಕ್ಸ್, 1ನೇ ಫೇಸ್,
ಜೆ.ಪಿ. ನಗರ

**ಬುಧವಾರ** (ಸಂಜೆ 7 ರಿಂದ 8 ಘಂ.)
ಆರ್ಯ ಸಮಾಜ, ಸಿ.ಎಂ.ಹೆಚ್. ರೋಡ್,
ಇಂದಿರಾನಗರ

ಹಿಮಾಂಶು, 4ನೆಯ ಮೇನ್, ಮಲ್ಲೇಶ್ವರಂ

ಮಾರುತಿ ಮಂದಿರ, ವಿಜಯನಗರ

**ಗುರುವಾರ** (ಸಂಜೆ 7 ರಿಂದ 8 ಘಂ.)
ದೇವಗಿರಿ ವೆಂಕಟೇಶ್ವರ ದೇವಸ್ಥಾನ
ಬನಶಂಕರಿ 2ನೆಯ ಸ್ಟೇಜ್

**ಶುಕ್ರವಾರ** (ಸಂಜೆ 7 ರಿಂದ 8 ಘಂ.)
ಇಂಡಿಯನ್ ಹೆರಿಟೇಜ್ ಅಕಾಡೆಮಿ
6ನೆಯ ಬ್ಲಾಕ್, ಕೋರಮಂಗಲ

**ಶನಿವಾರ** (ಸಂಜೆ 7 ರಿಂದ 8 ಘಂ.)
ದೇವಗಿರಿ ವೆಂಕಟೇಶ್ವರ ದೇವಸ್ಥಾನ,
ಬನಶಂಕರಿ 2ನೇ ಹಂತ

### ಆನೇಕಲ್‌ನಲ್ಲಿ

**ಸೋಮವಾರ** (ಸಾಯಂಕಾಲ 6 ರಿಂದ 7 ಘಂ.)
**ಮಂಗಳವಾರ** (ಬೆಳಿಗ್ಗೆ 6 ರಿಂದ 7 ಘಂ.)

**ಸಪ್ತರ್ಷಿ ಧ್ಯಾನ ಕೇಂದ್ರ, ರಾಜರಾಜೇಶ್ವರಿ ಬಡಾವಣೆ**

ಹೊರಗಿನ ಸಾಧಕರಿಗೆ ಅಂಚೆ ಮತ್ತು ಇ-ಮೇಲ್‌ಗಳ ಮೂಲಕ ಧ್ಯಾನದ ತರಗತಿಗಳು ಲಭ್ಯವಿವೆ. ಹೆಚ್ಚು ಮಾಹಿತಿಗಾಗಿ ಆರನೇ ಪುಟದ ಮೊದಲನೇ ಕಾಲಂ ನೋಡಿ.

**ಡೋರ್‌ವೇಸ್ (ಇಂಗ್ಲಿಷ್)/ತಪೋವಾಣಿ (ಕನ್ನಡ) ಪ್ರಕಾಶ್‌ಮಾರ್ಗ್ (ಮರಾಠಿ) ವಾರ್ತಾಪತ್ರದ ವಾರ್ಷಿಕ ಚಂದಾ ರೂ. 300/- ಡಿಡಿಯನ್ನು 'Manasa Light Age Foundation' ಹೆಸರಿನಲ್ಲಿ ಕಳುಹಿಸಬೇಕು. ಮನಿಯಾರ್ಡರ್‌ಗಳನ್ನು ಸ್ವೀಕರಿಸುವುದಿಲ್ಲ.**

### ಮಾಸ ಪತ್ರಿಕೆ

ನಿಮ್ಮ ಸ್ನೇಹಿತರಿಗೆ ತಪೋವಾಣಿಯನ್ನು ಉಡುಗೊರೆಯಾಗಿ ಕೊಡಿ. ವಾರ್ಷಿಕ ಚಂದಾ ದೊಂದಿಗೆ ಅವರ ಹೆಸರು ಮತ್ತು ವಿಳಾಸವನ್ನು ನಮಗೆ ಕಳುಹಿಸಿ.



**2017ರ ಅಮರ ಜಯಂತಿ ದಿನದಂದು ತೆಗೆದ ಫೋಟೋ ಒಂದರಲ್ಲಿ ಕೇಸರಿ ಹೊಂಬಣ್ಣದ ಪ್ರಕಾಶವಾದ ಬೆಳಕಿನ ಗೋಲವೊಂದು (orb) ಕಂಡುಬಂತು**

### ಸುದ್ದಿ-ಸೂಚನೆ

- 01-02-2018 ರಂದು 'ವಿಶ್ವ ಚಾನಲ್ಸ್ ದಿನ'ವನ್ನು ಆಚರಿಸಲಾಗುವುದು. ಆ ದಿನ ಸಾವಿರಾರು ಶಾಲೆಗಳಲ್ಲಿ ಒಂದು ಮಿಲಿಯನ್‌ಗೂ ಹೆಚ್ಚು ಮಕ್ಕಳು ಲೈಟ್ ಚಾನಲ್ ಮಾಡುತ್ತಾರೆ. ಅಂದು ನಿಮ್ಮ ನಿಮ್ಮ ಸ್ಥಳದಿಂದಲೇ ನಿಮಗೆ ಅನುಕೂಲವಾದ ಯಾವುದೇ ಸಮಯದಲ್ಲಿ 7 ನಿಮಿಷಗಳ ಕಾಲ ಲೈಟ್ ಚಾನಲ್ ಮಾಡುವ ಮೂಲಕ ಈ ಕಾರ್ಯಕ್ರಮದಲ್ಲಿ ಭಾಗವಹಿಸಬೇಕಾಗಿ ವಿನಂತಿ.
- 4-2-2018 ರಂದು ತಪೋನಗರದಲ್ಲಿ ಅಮರ ಜಯಂತಿ ಕಾರ್ಯಕ್ರಮವನ್ನು ಆಚರಿಸಲಾಗುವುದು. ನಿಮಗೆಲ್ಲರಿಗೂ ಈ ವಿಶೇಷ ಕಾರ್ಯಕ್ರಮಕ್ಕೆ ಆದರದ ಸ್ವಾಗತ. ಭಾಗವಹಿಸಲು ಇಚ್ಛಿಸುವವರು, 02-02-2018 ರೊಳಗೆ ಮಾನಸ ಆಫೀಸಿನಲ್ಲಿ ತಮ್ಮ ಹೆಸರನ್ನು ನೋಂದಾಯಿಸಬೇಕಾಗಿ ವಿನಂತಿ.
- 14-01-2018 ರಂದು ಶಂಬಲ ಗ್ರೂಪ್ ಸದಸ್ಯರ ಮತ್ತು 21-01-2018 ರಂದು 'ರಾ' ಗ್ರೂಪ್ ಸದಸ್ಯರ 2018ನೇ ಇಸವಿಯ ಮೊದಲ ಮೀಟಿಂಗ್ ನಡೆಯಿತು.

### ಮಹಾ ಶಿವರಾತ್ರಿ ತಂತ್ರ

ಮಹಾ ಶಿವರಾತ್ರಿಯಂದು ರಾತ್ರಿ, ಶಿವನ ಅಂಶವನ್ನು ಋಷಿಗಳು ಕೆಳತರುತ್ತಾರೆ, ಮಾರನೆಯ ದಿನ ಬೆಳಿಗ್ಗೆ ಬೆಳಕಿನ ಕಿರಣದ ರೂಪದಲ್ಲಿ ಅದು ಈ ಭೂಮಿಯ ಮೇಲಿರುವ ಪ್ರತಿಯೊಂದು ಮನೆಯನ್ನೂ ಪ್ರವೇಶಿಸುತ್ತದೆ. ಅವನ ಚೈತನ್ಯವು 10 ದಿನಗಳವರೆಗೆ ಇಲ್ಲಿರುತ್ತದೆ. ಈ 10 ದಿನಗಳು, ಅವನ ವಿಶೇಷ ಇರುವಿಕೆಯ ಅರಿವಿನಲ್ಲಿ ನಾವಿರಬಹುದು. ಶಿವನನ್ನು ಅನುಭವಿಸುವುದಕ್ಕಾಗಿ ಮತ್ತು ಅವನ ಚೈತನ್ಯವನ್ನು ಪಡೆಯುವುದಕ್ಕಾಗಿ ಈ ತಂತ್ರವನ್ನು ಮಹಾಶಿವರಾತ್ರಿಯಿಂದ ಮುಂದಿನ 10 ದಿನಗಳವರೆಗೆ ದಿನನಿತ್ಯದ ಧ್ಯಾನದ ಬದಲಿಗೆ ನಾವು ಅಭ್ಯಾಸ ಮಾಡಬಹುದು. ಒಂದು ದೊಡ್ಡ ನೀಲಿಬಣ್ಣದ ಶಿವಲಿಂಗವನ್ನು ನಿಮ್ಮೆದುರು ಊಹಿಸಿಕೊಳ್ಳಿ, ನೀವು ಒಂದು ಬೆಳಕಿನ ಕಣವಾಗಿ ಈ ಶಿವಲಿಂಗವನ್ನು ಪ್ರವೇಶ ಮಾಡಿದ ಹಾಗೆ ಊಹಿಸಿಕೊಳ್ಳಿ, ನೀಲಿ ಬೆಳಕನ್ನು ಅನುಭವಿಸಿ.

### ಧ್ಯಾನಕ್ಕೆ ವಿಶೇಷ ದಿನಗಳು

| | | |
|---|---|---|
| 01 | ಗುರು | ಅಮರ ಜಯಂತಿ<br>ವಿಶ್ವ ಚಾನಲ್ಸ್ ದಿನ |
| 04 | ಭಾನು | ಅಮರ ಜಯಂತಿ ಕಾರ್ಯಕ್ರಮ |
| 08 | ಗುರು | ಕೃಷ್ಣ ಅಷ್ಟಮಿ |
| 13 | ಮಂಗಳ | ಮಹಾ ಶಿವರಾತ್ರಿ |
| 15 | ಗುರು | ಅಮಾವಾಸ್ಯೆ |
| 16 | ಶುಕ್ರ | ಸೂರ್ಯಗ್ರಹಣ (ಬೆಳಗಿನ ಜಾವ 12.25 - 04.17 ರವರೆಗೆ) |
| 23 | ಶುಕ್ರ | ಶುಕ್ಲ ಅಷ್ಟಮಿ |
| 25 | ಭಾನು | ಶುಕ್ಲ ದಶಮಿ |

### ಈ ತಿಂಗಳು ತಪೋನಗರದಲ್ಲಿ

| | |
|---|---|
| ಭಾನುವಾರಗಳು: | ಉಪನ್ಯಾಸಗಳು: ಬೆಳಿಗ್ಗೆ 11-12<br>ಲೈಟ್ ಚಾನಲಿಂಗ್:<br>ಮಧ್ಯಾಹ್ನ 12-1 |
| 04-2-2018 | ಅಮರ ಜಯಂತಿ ಕಾರ್ಯಕ್ರಮ |
| 13-2-2018 | ಮಹಾಶಿವರಾತ್ರಿ ವಿಶೇಷ ಧ್ಯಾನ:<br>ಮಧ್ಯಾಹ್ನ 12-1 |

### ತಪೋನಗರದಲ್ಲಿ ಅಮರ ಜಯಂತಿ ಕಾರ್ಯಕ್ರಮ
**ಭಾನುವಾರ, 04-02-2018**

| | |
|---|---|
| ಬೆಳಿಗ್ಗೆ 11 ಕ್ಕೆ | ಸ್ವಾಗತ<br>ಭಾಷಣಗಳು<br>ವಿಶೇಷ ಧ್ಯಾನ |
| ಮಧ್ಯಾಹ್ನ 12.30ಕ್ಕೆ | ಪ್ರಸಾದ |

### ಆನೇಕಲ್ ಕಾರ್ಯಕ್ರಮ

ಅಮರ ಜಯಂತಿ ಕಾರ್ಯಕ್ರಮವನ್ನು ಆನೇಕಲ್‌ನ ನಮ್ಮ ಸಪ್ತರ್ಷಿ ಧ್ಯಾನ ಕೇಂದ್ರದಲ್ಲಿ 01-02-2018 ರಂದು ಬೆಳಿಗ್ಗೆ 11.30 ಘಂಟೆಗೆ ಆಯೋಜಿಸಲಾಗಿದೆ.

ಫೆಬ್ರವರಿ 16ರಂದು ಬೆಳಗಿನ ಜಾವ 12.25 ರಿಂದ 04.17 ಘಂಟೆಯವರೆಗೆ ಸೂರ್ಯ ಗ್ರಹಣವಿರುತ್ತದೆ. ಗ್ರಹಣದ ಸಮಯ ಪೂರ್ತಿ ಇಡೀ ಪ್ರಪಂಚಕ್ಕೆ ಬೆಳಕನ್ನು ಚಾನಲ್ ಮಾಡಬೇಕಾಗಿ ವಿನಂತಿ.

## ಲೈಟ್ ಚಾನಲಿಂಗ್ ಅನುಭವಗಳು

ಸಂ: ವೈಶಾಲಿ ಜೋಶಿ; ಅನು: ಪಾಂಡುರಂಗ

ಲೈಟ್ ಚಾನಲಿಂಗ್ ಅಭ್ಯಾಸ ನನಗೆ ಸಮಾಧಾನ ತರುತ್ತದೆ. ಈಗ ನನ್ನಲ್ಲಿ ನಕಾರಾತ್ಮಕ ಯೋಚನೆಗಳಿಲ್ಲ. ಲೈಟ್ ಚಾನಲಿಂಗ್ ಅಭ್ಯಾಸಮಾಡಿದ ನಂತರ ಉಪಾಧ್ಯಾಯರು ಮಾಡುವ ಪಾಠವನ್ನು ಬಹಳ ಆಸಕ್ತಿಯಿಂದ ಕೇಳುತ್ತೇನೆ. ನನ್ನ ಸ್ನೇಹಿತರೊಂದಿಗೆ ಮತ್ತು ಉಪಾಧ್ಯಾಯರುಗಳ ಜೊತೆಗೆ ಸಂತೋಷದಿಂದ ಇದ್ದೇನೆ. ಆದಕಾರಣ ನನಗೆ ಲೈಟ್ ಚಾನಲಿಂಗ್ ಅಂದರೆ ಇಷ್ಟ.

– ವಂದನ, ಆರನೇ ತರಗತಿ, ಶ್ರೀ ಶಾರದ ಪ್ರೈಮರಿ ಸ್ಕೂಲ್, ಜಯನಗರ, ಬೆಂಗಳೂರು.

ಒಂದೇ ಒಂದು ಸಲ ಲೈಟ್ ಚಾನಲಿಂಗ್ ನಡೆಸಿದ್ದ ಶಾಲೆಯಲ್ಲಿ, ಎಷ್ಟರ ಮಟ್ಟಿಗೆ ವಿದ್ಯಾರ್ಥಿಗಳು ಲೈಟ್ ಚಾನಲಿಂಗ್ ಅಭ್ಯಾಸದ ಬಗ್ಗೆ ತಿಳಿದುಕೊಂಡಿದ್ದಾರೆ ಎಂಬ ಕುತೂಹಲದಿಂದ, ನಾನು ಬೆಳಕಿನ ಬಗ್ಗೆ ಕೆಲವು ಪ್ರಾಥಮಿಕ ಹಂತದ ಪ್ರಶ್ನೆಗಳನ್ನು ಕೇಳಿದೆ. ಅವರು ಬಹಳ ಸುಂದರವಾಗಿ ಉತ್ತರಿಸಿದರು. ಆದರೆ, ನಾವು ಬೆಳಕನ್ನು ಹರಡಿದಾಗ ಏನಾಗುತ್ತದೆ?, ನಾವು ಏಕೆ ಬೆಳಕನ್ನು ಹರಡಬೇಕು?, ಎಂಬ ಪ್ರಶ್ನೆಗಳನ್ನು ಕೇಳಿದಾಗ ಮೌನ ವಹಿಸಿದ್ದರು. ಒಂದು ಹುಡುಗಿ ನಿಂತುಕೊಂಡು ಸರಿಯಾಗಿ ಉತ್ತರಿಸಿದಳು. ನಂತರ ನನಗೆ ತಿಳಿಯಿತು – ಆ ಹುಡುಗಿ ಅಂಧಳೆಂದು. ಆದರೆ ಇದು ಅಂಧರ ಶಾಲೆ ಆಗಿರಲಿಲ್ಲ. ನಾನು ಪ್ರದರ್ಶಿಸಿದ್ದ ಚಿತ್ರ ಪಟ ಆಕೆಗೆ ನೋಡುವುದಕ್ಕೆ ಸಾಧ್ಯವಿರಲಿಲ್ಲ. ಕೇವಲ ನಮ್ಮ ಮಾತುಗಳನ್ನು ಕೇಳಿ ಅರ್ಥ ಮಾಡಿಕೊಂಡಿದ್ದಳು, ಅದೂ ಕೇವಲ ಒಂದೇ ಒಂದು ಲೈಟ್ ಚಾನಲಿಂಗ್ ಸೆಷನ್‌ನಿಂದ!

– ಹೇಮ್‌ನಾಥ್, ವಾಲೆಂಟಿಯರ್

ವಿಶ್ವ ಚಾನಲ್ಸ್ ದಿನಕ್ಕೆ ಮುಂಚಿತವಾಗಿ, ಲೈಟ್ ಚಾನಲಿಂಗ್ ಸೆಷನ್ ನಡೆಸುವುದಕ್ಕಾಗಿ ಶಾಲೆಗಳನ್ನು ಸಂಪರ್ಕಿಸುತ್ತಿದ್ದೆ. ನಾನು ಒಬ್ಬಳೇ ನಡೆದುಕೊಂಡು ಹೋಗುವಾಗ ಆಯಾಸಗೊಂಡಿದ್ದೆ, ಸ್ವಲ್ಪ ತಲೆ ಸುತ್ತುತ್ತಿತ್ತು. ನಾನು ಮೂರನೇ ಶಾಲೆಗೆ ಹೋಗುತ್ತಿದ್ದಾಗ, ಬಿಸಿಲು ಹೆಚ್ಚಾಗಿ ನನಗೆ ನಡೆಯುವುದಕ್ಕೆ ಸಾಧ್ಯವಾಗಲಿಲ್ಲ. ನಾನು ಅಧೈರ್ಯಗೊಂಡೆ. "ಗುರೂಜಿ ನನಗೆ ಇನ್ನು ನಡೆಯುವುದಕ್ಕೆ ಸಾಧ್ಯವಿಲ್ಲ. ದಯವಿಟ್ಟು ನನಗೆ ಸಹಾಯ ಮಾಡಿ," ಎಂದು ಗುರೂಜಿಯವರಿಗೆ ಮೊರೆಯಿಟ್ಟೆ. ಆಶ್ಚರ್ಯವೆಂಬಂತೆ ಗುರೂಜಿ ನನ್ನ ಪಕ್ಕದಲ್ಲಿ ನಿಂತಿರುವಂತೆ ಅನುಭವವಾಯಿತು ಮತ್ತು ಅವರ ಧ್ವನಿಯನ್ನು ಕೇಳಿದೆ. ಅವರು ಹೇಳಿದರು, "ನೀವು ಸರಿಹೋಗುತ್ತೀರಿ, ಚಿಂತೆ ಮಾಡಬೇಡಿ. ನೀವು ನಡೆಯಿರಿ". ಅವರ ಧ್ವನಿಯ ಜೊತೆಗೆ ಚೈತನ್ಯಗಳ ಅನುಭವ ನನಗಾಯಿತು. ಅದು ಸಾಂತ್ವನಗೊಳಿಸುವಂತೆ ಇತ್ತು. ಇದರಿಂದ ನನಗೆ ಸಂತೋಷವಾಗಿ ನಾನು ನಡೆಯುವುದಕ್ಕೆ ಪ್ರಾರಂಭಿಸಿದೆ. ನನ್ನ ಕೆಲಸವನ್ನು ಪೂರ್ತಿ ಮಾಡಿ ಮಧ್ಯಾಹ್ನ ಮನೆಗೆ ಹಿಂದಿರುಗಿದೆ.

– ಶೋಭನ ಕೆ., ವಾಲೆಂಟಿಯರ್.

## ತಪೋನಗರ ಡೈರಿ

ಸೀಮಾ ಅಲ್‌ವೇಲ್; ಅನು: ಪಾಂಡುರಂಗ

ಬದಲಾವಣೆ ನಿರಂತರ, ಹಾಗೇ ನಿರಂತರತೆಯೇ ಒಂದು ಅಧ್ಯಾತ್ಮ ಮಾರ್ಗದ ಅಂತಃಶಕ್ತಿಯ ಪುರಾವೆ. ಅಧ್ಯಾತ್ಮ ಮಾರ್ಗದ ಸಿದ್ಧಾಂತಗಳು ಆ ಮಾರ್ಗವನ್ನು ಹುಟ್ಟುಹಾಕುವಲ್ಲಿ ಮತ್ತು ಪೋಷಿಸುವಲ್ಲಿ ಮಾರ್ಗದರ್ಶಿಸುತ್ತವೆ ಮತ್ತು ವ್ಯವಸ್ಥೆಗಳು, ಮೂಲಭೂತ ಸೌಕರ್ಯಗಳು, ಯೋಜನೆಗಳು ಮತ್ತು ಇನ್ನಿತರ ನಿರ್ವಹಣೆಗಳನ್ನು ಮಾರ್ಗದರ್ಶಿಸುತ್ತವೆ; ತಪೋವನ ಮತ್ತು ಅಂತರ್‌ವನ ಇದರ ಉದಾಹರಣೆಗಳು. ಅಮೂಲ್ಯವಾದ ಚಕ್ರ ಚೈತನ್ಯಗಳನ್ನು ಸಂಗ್ರಹಿಸುವುದಕ್ಕಾಗಿ ಮತ್ತು ಮಹಾನ್ ಸಪ್ತ ಋಷಿಗಳ ಆತಿಥ್ಯಕ್ಕಾಗಿ ಗುರೂಜಿಯವರು ಹಸಿರಾದ ತಪೋವನವನ್ನು ನಿರ್ಮಿಸಿದರು.

ವಾಹನ ನಿಲುಗಡೆ ಸ್ಥಳದಿಂದ ಪ್ರವೇಶಿಸುತ್ತಿದ್ದಂತೆ ಪೂಜ್ಯ ಅಮರಾಜೀಯವರ ಮೂರ್ತಿಯ ದರ್ಶನ ಆಗುತ್ತದೆ. ಬಲ ಬದಿಯಲ್ಲಿ ಗುರೂಜೀಯವರ ಮಹಾ ಸಮಾಧಿ ಸ್ಥಳ ಮತ್ತು ಎಡ ಬದಿಯಲ್ಲಿ ಸಪ್ತ ಋಷಿಗಳ ಗುಹೆ ಇದೆ. ಯಾವ ಕಡೆಗೆ ಹೋಗಿ ಯಾವ ಸ್ಥಳವನ್ನು ಆಯ್ಕೆ ಮಾಡಿಕೊಳ್ಳಲಿ ಎಂಬ ಕಷ್ಟದ ನಿರ್ಧಾರ ತೆಗೆದುಕೊಂಡನಂತರ ತಪೋವನ ಸ್ವಾಗತಿಸುತ್ತದೆ. ನಿತ್ಯ ಹಸುರಿನಲ್ಲಿ ದಟ್ಟವಾಗಿ ಸೊಂಪಾಗಿ ಬೆಳೆದಿರುವ ಹಸಿರು ಗಿಡ ಮರಗಳು ಕೆಳಗಿನ ಭೂಮಿಯ ಕಂದು ಬಣ್ಣವನ್ನು ಮುಚ್ಚಿದೆ. ಆಯಾ ಋತುವಿನಲ್ಲಿ ಅರಳುವ ಹೂವಿನ ಮರಗಳಿಂದ ಎಲ್ಲವೂ ಚಿತ್ತಾಕರ್ಷಕವಾಗಿ ಕಾಣುತ್ತದೆ. ಚೈತನ್ಯಭರಿತ ಪ್ರದೇಶವನ್ನು ಚಕ್ರ ಮಂಟಪಗಳು ಮೌನವಾಗಿ ಅಲಂಕರಿಸಿವೆ. ನಮ್ಮ ಮನಸ್ಸು ಯೋಚನೆಗಳ ಸುಳಿಯಲ್ಲಿ ಕಲಕುವಂತೆ, ಏಳು ಕೊಳಗಳು ಕಪ್ಪೆಗಳಿಂದ ಕಲಕುತ್ತವೆ. ಕೊಳಗಳಲ್ಲಿ ಅರಳಿ ನಳನಳಿಸುವ ಲಿಲ್ಲೀಗಳು, ಒಂದು ಆಧ್ಯಾತ್ಮಿಕ ಸ್ಥಳದಲ್ಲಿ ಸಾಧಕನ ಮನಸ್ಸು ಯೋಚನೆಗಳಲ್ಲಿ ಸಿಲುಕಿದ್ದರೂ ಸಹ, ಆತನ ಮನಸ್ಸಿನಿಂದ ದೈವಿಕ ವಿಚಾರಗಳು ಹೊರಹೊಮ್ಮಬಲ್ಲವೆಂಬ ಸಂದೇಶವನ್ನು ಸಾರುತ್ತಿವೆ.

ನಿವಾಸಿಗಳ ಸಂಖ್ಯೆಯಲ್ಲಿ ಹೆಚ್ಚಳ ಮತ್ತು ವಾಹನ ಸಂಚಾರ ಹೆಚ್ಚಾಗಿದ್ದರೂ, ತಪೋವನ ಮೌನದ ಭಾವಪರವಶತೆಯನ್ನು ಕಳೆದುಕೊಂಡಿಲ್ಲ. ಕಾರ್ಯಕರ್ತೆ ಶ್ರೀದೇವಿ ಬಿ.ವಿ. ಅವರ ನಿರಂತರ ಆರೈಕೆಯಲ್ಲಿ ಹಸಿರು ತಪೋವನ ತನಗೆ ಬೇಕಾದ ನಿರ್ವಹಣೆಯನ್ನು ಪಡೆದುಕೊಳ್ಳುತ್ತಿದೆ.

ತಪೋವನ ಮತ್ತು ಅಂತರ್‌ವನ ಮೌನದಲ್ಲಿಯೇ ಅಧ್ಯಾತ್ಮಿಕ ಚೈತನ್ಯಗಳನ್ನು ಸಂಗ್ರಹಿಸಿಟ್ಟುಕೊಂಡಿವೆ, ಮತ್ತು ನಮ್ಮನ್ನು ನಿಶ್ಚಲತೆಯ ಅನುಭವಕ್ಕೆ ಕರೆದುಕೊಂಡು ಹೋಗುವ ಸಾಮರ್ಥ್ಯ ಅವುಗಳಿಗಿದೆ. ■

## ಲೈಟ್ ಚಾನಲ್ಸ್

ವಿಶ್ವ ಸಂಚಲನ

ಇದೊಂದು ಆತ್ಮಪ್ರಜ್ಞೆಯಲ್ಲಿ ನಡೆಯುವ ಸಂಚಲನ. ಈ ಪ್ರಪಂಚವನ್ನು ಬೆಳಕು, ಶಾಂತಿ ತುಂಬಿರುವ ಒಂದು ಸುಂದರ ಪ್ರದೇಶವನ್ನಾಗಿ ಮಾಡುವ ಸಂಚಲನ. ಇಲ್ಲಿ ಭಾಷಣಗಳು, ಬಾವುಟಗಳಿಲ್ಲ. ಇಲ್ಲಿ ಬೆಳಕನ್ನು ಮೇಲಿನಿಂದ ತಂದು ಸುತ್ತಲೂ ಹರಡಿದರೆ ಅಷ್ಟೇ ಸಾಕು. ಉಳಿದ ಎಲ್ಲ ಕೆಲಸವನ್ನೂ ಬೆಳಕೇ ಮಾಡುತ್ತದೆ.

ನಾವು ಬೆಳಕನ್ನು ತಂದು ಹರಡಿದಾಗ, ಅದು ಬೇರೆಯವರ ಹೃದಯಗಳು ಮನೆಗಳನ್ನು ತುಂಬಿ, ಅವರ ಭಾವನೆ–ವಿಚಾರಗಳಲ್ಲಿರುವ ಕತ್ತಲನ್ನು ಬೆಳಕನ್ನಾಗಿ ಪರಿವರ್ತಿಸುತ್ತದೆ. ಆಗ ವ್ಯಕ್ತಿಗಳಲ್ಲಿ ಪರಿವರ್ತನೆ ಯುಂಟಾಗುತ್ತದೆ. ವ್ಯಕ್ತಿಗಳಿಂದ ಪ್ರಪಂಚ ಪರಿವರ್ತಿತವಾಗುತ್ತದೆ. ಪ್ರಪಂಚದಲ್ಲಿ ಬೆಳಕು ತುಂಬುತ್ತದೆ.

ಈ ಬೆಳಕು ಸಾಧಾರಣ ಬೆಳಕಲ್ಲ. ಯಾವ ಬೆಳಕಿನಿಂದ ಇಡೀ ಸೃಷ್ಟಿ ಬಂದಿದೆಯೋ ಆ ಮೂಲ ಬೆಳಕು. ಈ ಬೆಳಕಿನಲ್ಲಿ ಎಲ್ಲಾ ಇದೆ – ಶಕ್ತಿ, ವಿವೇಕ ಮತ್ತು ಭವಿಷ್ಯ. ಈ ಬೆಳಕು ಕಾಣುವುದಿಲ್ಲ. ಆದರೆ ಎಲ್ಲಾ ಕಡೆ ಇದೆ.

**ನಾವು ಪ್ರತಿದಿನ ಏಳುವಾಗ ಮತ್ತು ಮಲಗುವಾಗ 7 ನಿಮಿಷಗಳ ಕಾಲ ಈ ಬೆಳಕನ್ನು ತಂದು ಹರಡೋಣ. ಹರಡಿ ಪ್ರಪಂಚದಲ್ಲಿ ಪರಿವರ್ತನೆಯನ್ನು ತರೋಣ.**

ಈ ಸಂಚಲನವನ್ನು 18–5–2008 ರಂದು, ಗುರೂಜಿ ಕೃಷ್ಣಾನಂದರ ಮೂಲಕ, ಸಪ್ತಋಷಿಗಳು ಪ್ರಾರಂಭಿಸಿದರು.

ಈ ಸಂದೇಶವನ್ನು ಬೇರೆಯವರಿಗೆ ಹರಡಿ. ಈ ಸಂಚಲನವನ್ನು ಬೆಳೆಸಿ. ನಮ್ಮ ವೆಬ್‌ಸೈಟ್ www.lightchannels.com ಗೆ ಬನ್ನಿ.

## ಶಂಬಲದ ತತ್ವಗಳು

**ಶಂಬಲದ ಈ ಏಳು ತತ್ವಗಳನ್ನು ಪುರಾತನ ಋಷಿಗಳು ಕೊಟ್ಟಿದ್ದಾರೆ. ಇವುಗಳನ್ನು ಜೀವನದಲ್ಲಿ ಅಳವಡಿಸಿಕೊಂಡು ಶಂಬಲದಲ್ಲಿ ವಾಸಿಸುತ್ತಿರುವ ಜನ ಶಾಂತಿ–ಪೂರ್ಣತೆಗಳಿಂದ, ವೃದ್ಧಾಪ್ಯ ಬಾರದೆ ಯಾವಾಗಲೂ ಯೌವ್ವನದಲ್ಲಿಯೇ, ಬದುಕಿದ್ದಾರೆ.**

1. ನಮ್ಮೊಳಗಿರುವ ಬೆಳಕನ್ನು ಅನುಭವಿಸಿ, ಹೊರಗೆ ತಂದು ಹರಡುವುದು.
2. ಪ್ರೀತಿಯನ್ನು ಅನುಭವಿಸಿ ಸುತ್ತಲೂ ಹರಡುವುದು.
3. ಎಲ್ಲರಲ್ಲಿಯೂ ಮತ್ತು ಎಲ್ಲದರಲ್ಲಿಯೂ ಇರುವ ಚೈತನ್ಯವನ್ನು ಅನುಭವಿಸುವುದು.
4. ದಿನ ನಿತ್ಯದ ಚಟುವಟಿಕೆಗಳನ್ನು ಮೊದಲು ಮನಸ್ಸಿನಲ್ಲಿ ನೆನೆದು, ಅನಂತರ ಪಿಸುಮಾತಿನಲ್ಲಿ ಹೇಳಿ ಅನಂತರ ಕಾರ್ಯಗತ ಮಾಡುವುದು.
5. ಯಾವುದೇ ಗುರಿಯನ್ನು ಸಾಧಿಸುವ ಮೊದಲು, ಅದರ ಬಗ್ಗೆ ಹೆಚ್ಚು ಮಾತನಾಡದೆ ಗುಟ್ಟಾಗಿಡುವುದು.
6. ಧ್ಯಾನದಿಂದ ದೇಹ, ಮನಸ್ಸು ಮತ್ತು ಬುದ್ಧಿಗಳ ಶಕ್ತಿಗಳನ್ನು ಒಟ್ಟುಮಾಡಿ ಅರಿಷಡ್ವರ್ಗವನ್ನು ಗೆಲ್ಲುವುದು.
7. ನಮಗೆ ಬೇಕಾದ ಲೌಕಿಕ ಅಗತ್ಯಗಳ ಬಗ್ಗೆ ನಾವೇ ನಮ್ಮ ತೃಪ್ತಿಯ ರೇಖೆಗಳನ್ನು ಹಾಕಿಕೊಂಡು, ಆಧ್ಯಾತ್ಮಿಕ ಸಾಧನೆಯ ಬಗ್ಗೆ ಗಮನಕೊಡುವುದು.

## ಗುರೂಜಿಯವರ ನುಡಿಗಳು

### 28-8-2005: ಮಹರ್ಷಿ ಅಮರರವರ ಮಹಾಸಮಾಧಿ ದಿನ (ಮುಂದುವರಿದ ಭಾಗ)

ಸಂ: ಶೋಭಾ ಕೆ. ರಾವ್; ಅನು: ಸುಧಾಕರ್

ಅಮರರವರಿಂದ ನಮಗೆಷ್ಟು ಪ್ರಯೋಜನ ಆಗಿದೆ? ನಮ್ಮದೇ ಆದ ರೀತಿಯಲ್ಲಿ ನಮ್ಮೆಲ್ಲರಲ್ಲೂ ಅದಕ್ಕೆ ಉತ್ತರವಿದೆ. ಅವರು ನಿಮ್ಮೆಲ್ಲರನ್ನೂ ಬೇರೆ ಬೇರೆ ರೀತಿಯಲ್ಲಿ ಮುಟ್ಟಿದ್ದಾರೆ, ಆದರೆ ಪ್ರತಿಯೊಬ್ಬರ ಹೃದಯವನ್ನೂ ಅವರು ಮುಟ್ಟಿದ್ದಾರೆ. ನಮ್ಮ ಸಮಸ್ಯೆಗಳು ಪರಿಹಾರವಾಗಿವೆ. ಸಮಸ್ಯೆ ಬಗೆಹರಿಯದಿದ್ದಲ್ಲಿ, ಅದನ್ನು ಎದುರಿಸಲು ನಮ್ಮಲ್ಲಿ ಸಾಕಷ್ಟು ಬಲ ಮತ್ತು ವಿವೇಕ ಇದೆ. ನಾವೆಲ್ಲರೂ, ನಿಯಮಿತವಾಗಿ ಧ್ಯಾನಮಾಡುವವರು ಮತ್ತು ಮಾಡದಿರುವವರು, ಎಲ್ಲರೂ ಬದಲಾಗುತ್ತಿದ್ದೇವೆ. ಬಹುಶಃ ನಿಧಾನವಾಗಿ ಇರಬಹುದು. ಅದರ ಬಗ್ಗೆ ಅನುಮಾನವಿಲ್ಲ. ನಾವು ಕೂಡ ಬದಲಾಗುತ್ತಿದ್ದೇವೆ. ವೈಯಕ್ತಿಕವಾಗಿ ನನಗೆ ಭಾರಿ ಪ್ರಮಾಣದಲ್ಲಿ ಸಹಾಯ ದೊರೆತಿದೆ. ನಮ್ಮ ಕೆಲಸದಿಂದ ನಾವೇನನ್ನೂ ನಿರೀಕ್ಷಿಸಬಾರದೆಂದು ನನಗೆ ಅರಿವಾಗಿದೆ, ಫಲಿತಾಂಶಗಳನ್ನೂ ಕೂಡ. ನಮ್ಮ ಕೆಲಸವೆಂದರೆ ಪ್ರಸ್ತುತಪಡಿಸುವುದು, ನಾವು ಕೊಡಲು ಸಿದ್ಧರಿರುವುದಾಗಿ ತಿಳಿಸುವುದು ಅಷ್ಟೆ. ಬಹುಮಾನಗಳಿರುವುದಿಲ್ಲವೆಂದು ಋಷಿಗಳು ಹೇಳುತ್ತಾರೆ. ಆದರೆ ನನ್ನ ಅನುಭವವೆಂದರೆ, ಯಾವಾಗಲೂ ನಮಗೆ ಬಹುಮಾನಗಳಿರುತ್ತವೆ. ಬಹುಮಾನಗಳು ಅನೇಕವಿರುತ್ತವೆ ಹಾಗೂ ಅವು ಕೈತುಂಬವೇ ಇರುತ್ತವೆ.

ಜನರಲ್ಲಿ ದೈವೀ ಮಟ್ಟಕ್ಕೆ ಬೆಳೆಯುವ ಸಾಮರ್ಥ್ಯವಿದೆಯೆಂದು ಅರಿತಿದ್ದೇನೆ. ಆದರೆ ದುಃಖಕರ ಸಂಗತಿಯೆಂದರೆ, ಅವರು ಒಂದು ಮಟ್ಟವನ್ನು ತಲುಪುತ್ತಾರೆ, ನಂತರ ಅಲ್ಲಿಂದ ಮುಂದೆ ಅವರು ಬೆಳೆಯುವುದಿಲ್ಲ. ಅದನ್ನು ನಾನು ಒಪ್ಪಿಕೊಳ್ಳಬೇಕೆಂದು ಅರಿವಾಗಿದೆ. ಹಿಂದಿನ ದಿನಗಳಲ್ಲಿ ನಾನು ಆತುರಪಡುತ್ತಿದ್ದೆ, ಅವರನ್ನು ನನ್ನೊಂದಿಗೇ ಕರೆದೊಯ್ಯಲು ಪ್ರಯತ್ನಿಸುತ್ತಿದ್ದೆ, ಆದರೆ ಈಗ ಆತುರಪಡುತ್ತಿಲ್ಲ. ಈ ಸತ್ಯದ ಅರಿವಾದ ನಂತರ ನಾನು ಕಾಯುವುದನ್ನು ಕಲಿತಿದ್ದೇನೆ. ಋಷಿಗಳು ಜನ್ಮಾಂತರಗಳವರೆಗೆ ಕಾಯುವುದನ್ನು ನಾನು ಕಂಡಿದ್ದೇನೆ. ಆದ್ದರಿಂದ ನಾವು ಕಾಯಬೇಕು. ನಮಗಿಂತಲೂ ಉತ್ತಮರಾದ ಜನರು ಬರುತ್ತಾರೆಂದು ನಾನು ಮನಗಂಡಿದ್ದೇನೆ. ಅವರು ಪ್ರಪಂಚವನ್ನು ಉತ್ತಮಗೊಳಿಸುತ್ತಾರೆ. ಬಹುಶಃ, ನಾವುಗಳೇ ಉತ್ತಮ ವ್ಯಕ್ತಿಗಳಾಗಿ ಹಿಂದಿರುಗಿ ಬಂದು, ಮೊದಲಿಗೆ ನಾವು ಉತ್ತಮಗೊಂಡು ನಂತರ ಪ್ರಪಂಚವನ್ನು ಉತ್ತಮಗೊಳಿಸುತ್ತೇವೆ. ಏನನ್ನಾದರೂ ಕಲಿಸಬೇಕಾದರೆ ಮೊದಲಿಗೆ ನಾವು ಬಹಳಷ್ಟನ್ನು ಕಲಿಯಬೇಕು ಎನ್ನುವುದನ್ನು ನಾವು ಅರಿಯಬೇಕು. ಪ್ರಪಂಚದ ಅಜ್ಞಾನವನ್ನು ತೊಡೆಯಬೇಕಾದರೆ, ಮೊದಲಿಗೆ ನಮ್ಮೊಳಗಿನ ಅಜ್ಞಾನವನ್ನು ತೊಡೆಯಬೇಕು. ವಿಶ್ವ ಶಾಂತಿಯ ಬಗ್ಗೆ ಮಾತನಾಡುತ್ತೇವೆ, ಆದರೆ ಮೊದಲಿಗೆ ಅದನ್ನು ನಮ್ಮೊಳಗೆ ಸ್ಥಾಪಿಸಿಕೊಳ್ಳಬೇಕು. ದೇವರ ರಾಜ್ಯ ಪ್ರಾರಂಭವಾಗುವುದು ನನ್ನೊಳಗೆ ಅದನ್ನು ಸ್ಥಾಪಿಸಿಕೊಳ್ಳುವುದರಿಂದ.

ಸಾಧನೆಯ ಮತ್ತೊಂದು ಮಜಲನ್ನು ನಾವು ಪ್ರವೇಶಿಸುತ್ತಿದ್ದೇವೆನ್ನುವುದನ್ನು ನಾವು ಅರಿಯಬೇಕು. ಈ ಸಾಧನೆ ತಂತ್ರಗಳನ್ನು ಮೀರಿದ್ದು. ಇದು ನನಗೆ ಉದ್ಯೋಗವಲ್ಲ, ಇದೊಂದು ಜೀನಸೋದ್ದೇಶ. ನನಗೆ, ವಿದ್ಯಾರ್ಥಿಗಳಾದ ನೀವು ಕೇವಲ ವ್ಯಕ್ತಿಗಳಲ್ಲ, ಆತ್ಮಗಳು. ನನಗೆ, ನನ್ನ ಕೆಲಸವೇ ಪೂಜೆ. ಕಾರ್ಯಕರ್ತರು ಹಾಗೂ ಶಿಕ್ಷಕರು ಈ ವಿಷಯಗಳನ್ನು ಅರ್ಥಮಾಡಿಕೊಳ್ಳಬೇಕು ಹಾಗೂ ನೆನಪಿನಲ್ಲಿಟ್ಟುಕೊಂಡು ತಮ್ಮ ಕೆಲಸವನ್ನು ಪ್ರೀತಿಸಬೇಕು ಎಂದು ನಾನು ಬಯಸುತ್ತೇನೆ. ಅದನ್ನು ನೀವು ಗೌರವಿಸಬೇಕು. ಆಗ ಮಾತ್ರವೇ ನೀವು ಸರಿಯಾದ ಕೆಲಸ ಮಾಡಬಲ್ಲಿರಿ. ಕೆಲಸಕ್ಕೆ ಬರಬೇಕೆಂದು ಯಾರೂ ಬಲವಂತ ಮಾಡುತ್ತಿಲ್ಲ. ಇತರರೆಲ್ಲರಿಗೂ ನಾನು ಹೇಳಬಯಸುವುದೇ-ನೆಂದರೆ, ಧ್ಯಾನವನ್ನು ಪ್ರೀತಿಸಿ. ಆಗ ಮಾತ್ರವೇ ನೀವು ಧ್ಯಾನ ಮಾಡಬಲ್ಲಿರಿ. ನಿಮಗೆ ಯಾರೂ ಬಲವಂತ ಮಾಡುತ್ತಿಲ್ಲ. ಧ್ಯಾನವನ್ನು ಪ್ರಾಮಾಣಿಕವಾಗಿ ಮಾಡಿ. ನಿಯಮಿತವಾಗಿ ನೀವು ಧ್ಯಾನಮಾಡುತ್ತಿಲ್ಲದಿದ್ದರೂ ಧ್ಯಾನವನ್ನು ಪ್ರಾಮಾಣಿಕವಾಗಿ ಮಾಡಿ. ಕೆಲಸವನ್ನು ಪ್ರೀತಿಸಿದಾಗ ಅದೇ ಪೂಜೆ. ನಾನಿದನ್ನು ಕಳೆದ 3–4 ದಿನಗಳಿಂದ ನೋಡುತ್ತಿದ್ದೇನೆ. ಈ 3–4 ದಿನಗಳಿಂದಲೂ 3–4 ಕಾರ್ಯಕರ್ತರು ಗಂಟೆಗಟ್ಟಲೆ ಶ್ರಮಿಸುತ್ತಿದ್ದಾರೆ. ವಾಸ್ತವದಲ್ಲಿ ಅವರ ಬಗ್ಗೆ ಯಾರಿಗೂ ತಿಳಿಯುವುದಿಲ್ಲ. ಅವರು ಕಾಣಿಸಿಕೊಳ್ಳುವುದಿಲ್ಲ. ಅವರು ಈ ಕೆಲಸವನ್ನು ಮೌನವಾಗಿ ಮಾಡಿದ್ದಾರೆ. ಅವರು ಕೆಲಸವನ್ನು ಪ್ರೀತಿಸಿದರು, ಅವರಿಗೆ ಅಮರರವರ ಮೇಲೆ ಪ್ರೀತಿಯಿದೆ, ಅವರಿಗೆ ಈ ಸ್ಥಳದ ಮೇಲೆ ಅಂದರೆ ತಪೋನಗರದಮೇಲೆ ಪ್ರೀತಿಯಿದೆ. ನಮ್ಮಲ್ಲಿ ಪ್ರೀತಿಯಿದ್ದಾಗ ಮಾತ್ರವೇ ಕೆಲಸವನ್ನು ಮನಃಪೂರ್ವಕವಾಗಿ ಮಾಡುತ್ತೇವೆ.

ಉದ್ಯೋಗದಲ್ಲಿ ಮತ್ತು ಬದುಕಿನಲ್ಲಿ ಗೆಲುವು ಸಾಧಿಸಲು ಕಷ್ಟಪಡುತ್ತಿರುವವರನ್ನು ನಾನು ನೋಡುತ್ತಿದ್ದೇನೆ. ಗೆಲುವು ಸಾಧಿಸಿದ ನಂತರವೂ ಅವರು ತಮ್ಮ ಉದ್ಯೋಗದಲ್ಲಿ ಮತ್ತು ಬದುಕಿನಲ್ಲಿ ಕಷ್ಟಪಡುತ್ತಿರುವುದನ್ನೂ ನಾನು ನೋಡುತ್ತಿದ್ದೇನೆ. ಉದ್ಯೋಗದಲ್ಲಿ ಮತ್ತು ಬದುಕಿನಲ್ಲಿ ಇನ್ನೂ ಹೆಚ್ಚಿನದು ಇದೆ. ಹೆಸರು, ಹಣ, ಖ್ಯಾತಿ ಹಾಗೂ ಮತ್ತೆಲ್ಲವೂ ಇರುವ ಯಶಸ್ವೀ ವ್ಯಕ್ತಿಯೊಬ್ಬರು ನನಗೊಂದು ಉದ್ದದ ಪತ್ರ ಬರೆದರು, "ನನ್ನಲ್ಲಿ ಇವೆಲ್ಲವೂ ಇವೆ, ಹಾಗಿದ್ದರೂ ಜೀವನದಲ್ಲಿ ಏನೋ ಕೊರತೆ ಕಾಣಿಸುತ್ತದೆ. ಅದೇನು?" ನಾನು ಅವರಿಗೆ ಹೇಳಿದೆ, "ಅದು ಬೆಳಕಿನ ಅನುಪಸ್ಥಿತಿ." ಬೇರೆಲ್ಲವೂ ತಾತ್ಕಾಲಿಕ ತೃಪ್ತಿ ಕೊಡಬಹುದು, ಆದರೆ ಸ್ವಲ್ಪ ಸಮಯದ ನಂತರ ಇವು ಸಾಲದೆಂದು ಅರಿಯುತ್ತೇವೆ. ಬದುಕಿನಲ್ಲಿ ಇನ್ನೂ ಹೆಚ್ಚಿನದು ಇದೆ. ಬೆಳಕಿನ ಅನುಪಸ್ಥಿತಿಯಿಂದಲೇ ಕೊರತೆ ಭಾಸವಾಗುತ್ತಿದೆ ಎಂದು ಅವರು ಅರಿತರು, ಅವರ ಪ್ರಾಮಾಣಿಕತೆಯನ್ನು ನಾನು ಮೆಚ್ಚುತ್ತೇನೆ. ಅವರು ಹೇಳಿದರು, "ನಾನು ಸೋತಿದ್ದೇನೆ, ಜೀವನದಲ್ಲಿ ಏನನ್ನೋ ಕಳೆದುಕೊಂಡಿದ್ದೇನೆ, ದಯವಿಟ್ಟು ಸಹಾಯ ಮಾಡಿ!" ನಾವು ಅದೃಷ್ಟವಂತರು, ನಮ್ಮ ಸುತ್ತಲೂ ಎಷ್ಟೊಂದು ಬೆಳಕು ಇದೆ. ನಾವು ಮಾಡಬೇಕಾಗಿರುವ ಒಂದೇ ಒಂದು ಕೆಲಸವೆಂದರೆ, ನಾವು ತೆರೆದುಕೊಂಡು ನಮ್ಮೊಳಗೆ ಬೆಳಕು ಪ್ರವೇಶಿಸಲು ಅವಕಾಶ ಮಾಡಿಕೊಡಬೇಕು. ಅದನ್ನು ಪಡೆಯಲು ನಾವೇನೂ ಪ್ರಯತ್ನ ಮಾಡಬೇಕಾಗಿಲ್ಲ; ತೆರೆದುಕೊಂಡರೆ ಸಾಕು, ಅದು ಪ್ರವೇಶಿಸುತ್ತದೆ. ಬೆಳಕು ಕಾಯುತ್ತಿದೆ.

ಒಬ್ಬ ವ್ಯಕ್ತಿ ನನ್ನ ಬಗ್ಗೆ ಹೀಗೆ ಬರೆದರು, "ನಮ್ಮ ಗುರೂಜಿ ಒಬ್ಬ 'ಕೂಲ್ ಗೈ'!" ಇಂತಹ ಆಧುನಿಕ ಪದವಿನ್ಯಾಸವನ್ನು ಬಳಸಿಕೊಂಡು ನನ್ನ ಗುರುವನ್ನು "ಗರಿಷ್ಠ ಗುರು" (the maximum guru) ಎಂದು ಕರೆಯಬಯಸುತ್ತೇನೆ.

"Channelled Knowledge from the Rishi" ಪುಸ್ತಕವನ್ನು ಇಂದು ಬಿಡುಗಡೆ ಮಾಡುತ್ತಿದ್ದೇವೆ. ಇದು ಪ್ರಶ್ನೋತ್ತರಗಳ ಸಂಕಲನ. ಇದನ್ನು ದಾಖಲೆಯ ಸಮಯದಲ್ಲಿ ಹೊರತರಲಾಯಿತು! ಇದರಲ್ಲಿ ನನಗೆ ಅತೀವ ಸಂತೋಷ ತಂದ ವಿಷಯವೆಂದರೆ, ಇದನ್ನು ಒಬ್ಬ ವ್ಯಕ್ತಿ ಮಾತ್ರವೇ ಕುಳಿತು ಬರೆಯಲಿಲ್ಲ, ಈ ಬಾರಿ ಈ ಕೆಲಸದಲ್ಲಿ ಅನೇಕರು ತೊಡಗಿಕೊಂಡಿದ್ದನ್ನು ನಾನು ಕಂಡೆ. ಇದೊಂದು ಅದ್ಭುತ ವಿಷಯ. ಅವರ ಹೆಸರುಗಳನ್ನು ಪುಸ್ತಕದಲ್ಲಿ ನಮೂದಿಸಲಾಗಿದೆ. ಈ ರೀತಿಯ ಪ್ರಶ್ನೋತ್ತರಗಳ ಮತ್ತೊಂದು ಪುಸ್ತಕ ಬಹುಕಾಲದವರೆಗೆ ಬಿಡುಗಡೆಯಾಗದಿರಬಹುದು, ಏಕೆಂದರೆ ಜನರು ಪ್ರಶ್ನೆಗಳನ್ನು ಕೇಳುವುದನ್ನೇ ನಿಲ್ಲಿಸಿದ್ದಾರೆ. ಋಷಿಗಳಲ್ಲಿ ಎಲ್ಲ ಉತ್ತರಗಳೂ ಇವೆ, ಆದರೆ ನಮ್ಮಲ್ಲಿ ಸಾಕಷ್ಟು ಪ್ರಶ್ನೆಗಳಿಲ್ಲ. ಬಹುಶಃ ನಾವು ಬೆಳೆದಂತೆ, ಹೆಚ್ಚು ಪ್ರಶ್ನೆ ಕೇಳುವುದನ್ನು ಕಲಿಯಬಹುದೇನೋ. ■

# ಶ್ರೀ ಜಯಂತ್ ದೇಶ್‌ಪಾಂಡೆಯವರ ಭಾಷಣದ ಆಯ್ದ ಭಾಗಗಳು

ಸಂ: ಶೋಭಾ ಕೆ. ರಾವ್; ಅನು: ಸುಧಾಕರ್

10–12–2017

ನಾನು ಪತ್ರಿಕೆಯಲ್ಲಿ ಓದಿದ ಸಂದರ್ಶನದಲ್ಲಿ ದಲೈಲಾಮಾ ಅವರು, ಶಾಂತಿಯುತ ಜಗತ್ತನ್ನು ಸೃಷ್ಟಿಸಲು ಆಂತರಿಕ ಶಾಂತಿಯನ್ನು ನಮ್ಮಲ್ಲಿ ಬೆಳೆಸಿಕೊಳ್ಳಬೇಕೆಂದು ಹೇಳಿದ್ದರು. ಇಂತಹ ಆಳವಾದ ಸತ್ಯಗಳನ್ನು ಅತ್ಯಂತ ಸರಳ ವಿಧಾನಗಳಲ್ಲಿ ತಿಳಿಸುವ ಮಾಸ್ಟರ್‌ಗಳ ಬಗ್ಗೆ ನಾನು ಯಾವಾಗಲೂ ಯೋಚಿಸುತ್ತಿರುತ್ತೇನೆ. ಅವರೆಲ್ಲರೂ ಅದೇ ಸತ್ಯವನ್ನು ಅದೇ ಭಾಷೆಯಲ್ಲಿ ಹೇಳುತ್ತಾರೆ. ನಮ್ಮೊಳಗೆ ಶಾಂತಿಯಿಂದಿರಲು ನಮಗೆ ಸಾಧ್ಯವಾದರೆ ವಿಶ್ವಶಾಂತಿಗೆ ನಾವು ಕೊಡುಗೆ ನೀಡುತ್ತಿರುತ್ತೇವೆ ಎಂದು ಗುರೂಜಿಯವರು ಸಹ ಹೇಳಿದ್ದರು. ಧ್ಯಾನವು ಮೊದಲಿಗೆ ವ್ಯಕ್ತಿಗತ ಶಾಂತಿಗೆ ಹಾಗೂ ಅಂತಿಮವಾಗಿ ವಿಶ್ವಶಾಂತಿಗೆ ದಾರಿಯಾಗುತ್ತದೆ. ಬಲಪ್ರಯೋಗದ ದಾರಿ ಈಗ ಹಳತಾಗಿದೆ ಎಂದು ಕೂಡ ದಲೈಲಾಮ ಹೇಳಿದರು; ಬಲ ಪ್ರಯೋಗದಿಂದ ಸಮಸ್ಯೆಗಳು ಉದ್ಭವಿಸುತ್ತವೆ. ಎದುರು ಹಾಕಿಕೊಳ್ಳುವುದನ್ನು ನಾವು ತಪ್ಪಿಸಬೇಕೆಂದು ಕೂಡ ಗುರೂಜಿಯವರು ಹೇಳಿದ್ದರು. ಎದುರು ಹಾಕಿಕೊಳ್ಳದಿರುವ, ಮೌನ ಕ್ರಾಂತಿಯನ್ನು ಅವರು ನಮಗೆ ಕೊಡುಗೆಯಾಗಿ ನೀಡಿದರು. ಅದುವೇ ಲೈಟ್ ಚಾನಲ್ಸ್ ವಿಶ್ವ ಸಂಚಲನ. ಸಾಮಾನ್ಯ ವ್ಯಕ್ತಿಯ ಮಟ್ಟದಲ್ಲಿ ಬದಲಾವಣೆಗಳನ್ನು ತರಲು ಇದು ಅತ್ಯುತ್ತಮ ವಿಧಾನ.

'ಮಾನವನ ಮೂಲಗುಣವೆಂದರೆ ಕರುಣೆ,' ಎಂದೂ ದಲೈಲಾಮ ಹೇಳಿದ್ದಾರೆ. "ನಿರಂತರ ಕೋಪ ಮತ್ತು ಭಯ ನಮ್ಮ ಪ್ರತಿರಕ್ಷಣಾ ವ್ಯವಸ್ಥೆಯನ್ನು ನಾಶಮಾಡುತ್ತಿದೆ," ಎಂದು ಅವರು ಹೇಳಿದರು. ಅವರು ಏಕತೆಯ ಬಗ್ಗೆ ಹೇಳಿದರು ಮತ್ತು ಆಯುಧಗಳು ಮತ್ತು ಯುದ್ಧಗಳು ಬೇಕಾಗದಿರುವ ಭವಿಷ್ಯದ ದಿನಗಳ ಕನಸು ಕಂಡರು. ಅಂತಹ ಪ್ರಪಂಚದ ಕನಸು ನನಸಾಗುವುದರ ಬಗ್ಗೆ ಅವರಿಗೆ ಶೇಕಡಾ ನೂರರಷ್ಟು ನಂಬಿಕೆ ಇದೆ. ಮಾಸ್ಟರ್‌ಗಳು ಕನಸುಗಾರರು. ಅವರು ಕನಸು ಕಾಣುತ್ತಾರೆ. ಬಹುಶಃ ನಾವು ಕೂಡ ಅವರ ಹಾಗೆ ಕನಸು ಕಾಣುತ್ತಲೇ ಇರಬೇಕು. ನಮ್ಮ ಜೀವಿತಾವಧಿಯಲ್ಲಿಯೇ ಈ ಕನಸುಗಳು ನನಸಾಗಬಹುದು ಅಥವ ಆಗದಿರಬಹುದು ಎಂಬ ಅರಿವಿನಲ್ಲಿದ್ದುಕೊಂಡೇ ನಾವು ಕನಸು ಕಾಣಬೇಕು. ಅದು ಜನರ ಮೇಲೆ ಅವಲಂಬಿತವಾಗಿದೆ. ನಾವು ಎಷ್ಟು ಬೇಗ ಹೊಸ ಚೈತನ್ಯಗಳನ್ನು ಮತ್ತು ಬದಲಾವಣೆಗಳನ್ನು ಒಪ್ಪಿಕೊಳ್ಳುತ್ತೇವೆ ಎನ್ನುವುದನ್ನು ಅದು ಅವಲಂಬಿಸಿದೆ.

ಆಯ್ಕೆ ಮಾಡಿಕೊಳ್ಳುವುದರ ಬಗ್ಗೆ ಗುರೂಜಿಯವರು ಬಹಳಷ್ಟು ಹೇಳಿದ್ದಾರೆ. ಇದು ಈಗ ಪ್ರಸ್ತುತವಾಗಿದೆ. ಪ್ರಳಯ ಮುಗಿಯುವವರೆಗೂ ಇದು ಪ್ರಸ್ತುತವಾಗಿರುತ್ತದೆ. ಅಲ್ಲಿಂದ ಮುಂದಕ್ಕೆ ಬಹುಶಃ ನಮ್ಮ ಗಮನ ಪರಿಪೂರ್ಣತೆಯ ಕಡೆಗೆ ತಿರುಗಬಹುದು. ದೇವರ ಪ್ರಪಂಚದಲ್ಲಿ ಸ್ವಾತಂತ್ರ್ಯವಿದೆ. ನಮ್ಮ ಮೇಲೆ ಏನನ್ನೂ ಹೇರಲಾಗುವುದಿಲ್ಲ. ಪ್ರತಿಯೊಂದು ಸನ್ನಿವೇಶದಲ್ಲೂ ಬೆಳಕಿಗೆ ಶ್ರುತಿಗೊಳ್ಳುವುದನ್ನೇ ನಾವು ಆಯ್ಕೆ ಮಾಡಿಕೊಳ್ಳುತ್ತಾ ಹೋಗಬೇಕು. ಇದು ನಾವು ಪ್ರಜ್ಞಾಪೂರ್ವಕವಾಗಿ ಮಾಡುವ ಆಯ್ಕೆ. ಸಕಾರಾತ್ಮಕವಾದ ಎಲ್ಲವನ್ನೂ ನಾವು ಆಯ್ಕೆ ಮಾಡಿಕೊಳ್ಳುತ್ತೇವೆ. ಶಾಂತಿ, ಪ್ರಾಮಾಣಿಕತೆ, ಪ್ರೀತಿಯನ್ನು ಹರಡುವುದನ್ನು ಆಯ್ದುಕೊಳ್ಳುತ್ತೇವೆ. ಅದನ್ನು ನಾವು ಯಾರೊಂದಿಗೂ ಹೇಳಿಕೊಳ್ಳಬೇಕಾಗಿಲ್ಲ. ಇಂಥವುಗಳನ್ನು ನಮಗೆ ನಾವೇ ನೆನಪುಮಾಡಿಕೊಂಡು ಅಭ್ಯಾಸಕ್ಕೆ ತರಬೇಕು.

24–12–2017

ಈ ವರ್ಷ ಅಂತ್ಯಗೊಳ್ಳುವುದರೊಂದಿಗೆ ಅತಿಮುಖ್ಯವಾದ ವರ್ಷ ಆರಂಭವಾಗಲಿದೆ. ಪ್ರತಿ ಹೊಸ ವರುಷವೂ ಹೊಸ ಚೈತನ್ಯಗಳನ್ನು, ಹೊಸ ಅವಕಾಶಗಳನ್ನು, ಹೊಸ ಸಾಧ್ಯತೆಗಳನ್ನು ಮತ್ತು ಉತ್ತಮ ಬದುಕಿನ ಹೊಸ ಆಶಾಕಿರಣವನ್ನು ಹೊತ್ತು ತರುತ್ತದೆ.

ಇದು ತೀವ್ರವಾದ ಪ್ರಳಯದ ಕಾಲ. ಯಾವುದಾದರೊಂದು ರೀತಿಯಲ್ಲಿ ಈ ತೀವ್ರ ಪ್ರಳಯದ ಪರಿಣಾಮವು ನಮ್ಮೆಲ್ಲರನ್ನೂ ತಟ್ಟಿದೆ. ಶುದ್ಧಗೊಳಿಸುವುದು ಪ್ರಳಯದ ಭಾಗ. ಈ ಶುದ್ಧಗೊಳ್ಳುವಿಕೆಯು ವ್ಯಕ್ತಿಯ ಮಟ್ಟದಲ್ಲಿ, ಸಮಾಜದ ಮಟ್ಟದಲ್ಲಿ ಹಾಗೂ ಜಾಗತಿಕ ಮಟ್ಟಗಳಲ್ಲಿ ಜರುಗುತ್ತಿದೆ. ಸಾಧಕರಾದ ನಮಗೆ ನಮ್ಮ ವ್ಯಕ್ತಿಗತ ಆಂತರಿಕ ಶುದ್ಧೀಕರಣವು ಬಹು ಮುಖ್ಯ. ಸತ್ಯವು ಬಯಲಾಗುವುದು ಈ ಶುದ್ಧೀಕರಣ ಪ್ರಕ್ರಿಯೆಯ ಭಾಗ. ನಮ್ಮ ಭಾವನೆಗಳು, ನ್ಯೂನತೆಗಳು ಬಹಿರಂಗವಾಗುತ್ತವೆ, ಆಗ ಅವುಗಳನ್ನು ಖಂಡಿತವಾಗಿಯೂ ನಾವು ಗಮನಿಸುತ್ತೇವೆ. ಇವೆಲ್ಲವನ್ನೂ ನಾವು ವಸ್ತುನಿಷ್ಠವಾಗಿ ಗಮನಿಸಿದರೆ ನಕಾರಾತ್ಮಕ ಭಾವನೆಗಳಿಂದ ಬಿಡುಗಡೆ ಹೊಂದಬಹುದು, ಹಾಗೂ ನಮ್ಮಲ್ಲಿ ಇರಬಹುದಾದಂಥ ಸಕಾರಾತ್ಮಕ ಭಾವನೆಗಳನ್ನು ಗಟ್ಟಿಮಾಡಿಕೊಳ್ಳಬಹುದು.

ನಾನು ಅರ್ಥ ಮಾಡಿಕೊಂಡಿರುವ ಹಾಗೆ, ಈ ಬಹಿರಂಗವಾಗುವುದರ ಹಿಂದಿರುವ ಉದ್ದೇಶ ವ್ಯಕ್ತಿಯೊಬ್ಬನನ್ನು ನಿಂದಿಸುವುದಕ್ಕಾಗಿ ಅಥವ ಕೀಳಾಗಿ ಕಾಣುವುದಕ್ಕಾಗಿ ಅಲ್ಲ. ಯಾವುದೇ ದೈವೀ ಪ್ರಕ್ರಿಯೆಯ ಹಿಂದೆ ಇಂತಹ ಉದ್ದೇಶವಿರುವುದಿಲ್ಲ. ಅದರ ಹಿಂದಿರುವ ನಿಜವಾದ ವಿಚಾರವೆಂದರೆ, ವ್ಯಕ್ತಿಯೊಬ್ಬ ದೇವರೆಡೆಗೆ ಪಯಣಿಸುವುದಕ್ಕೆ ನೆರವಾಗುವುದು. ಅದು ಹೇಗೋ, ಅಹಂ ಮಾತ್ರ ಬೆಳಕಿಗೆ ಬರುವ ನಕಾರಾತ್ಮಕತೆಗಳನ್ನು ಸಮರ್ಥಿಸಿಕೊಳ್ಳುತ್ತದೆ. ದೇವರೊಂದಿಗೆ ಸಂಪರ್ಕಗೊಳ್ಳಲು ಮತ್ತು ಆ ಸಂಪರ್ಕವನ್ನು ಮುಂದುವರೆಸಲು ನಮ್ರತೆ ಸಹಾಯಮಾಡುತ್ತದೆ. ಆಗ ನಾವು ಸರಿಯಾದುದನ್ನೇ ಮಾಡುತ್ತೇವೆ. ನಮ್ಮ ನ್ಯೂನತೆಗಳನ್ನು ಒಪ್ಪಿಕೊಳ್ಳುತ್ತೇವೆ, ಅದು ಬಹುಮುಖ್ಯವಾದ ಮೊದಲ ಹೆಜ್ಜೆ. ನಂತರ ಪರಿವರ್ತನೆಯ ಪ್ರಕ್ರಿಯೆಯನ್ನು ನಾವು ಪ್ರಾರಂಭಿಸಬಹುದು. ನಮ್ಮ ನ್ಯೂನತೆಗಳನ್ನು ಒಪ್ಪಿಕೊಳ್ಳದಿದ್ದಾಗ, ಪರಿವರ್ತನೆಯ ಪ್ರಕ್ರಿಯೆ ಪ್ರಾರಂಭವೂ ಆಗುವುದಿಲ್ಲ.

2018ರಲ್ಲಿ ಹೊಸಯುಗದ ಕಡೆಗೆ ವಿಶ್ವವು ದೊಡ್ಡ ಹೆಜ್ಜೆಯಿಡುವುದನ್ನು ನಿರೀಕ್ಷಿಸಬಹುದು ಎಂದು ಗುರೂಜಿಯವರು ಹೇಳಿದ್ದರು. ನಮ್ಮ ಆಧ್ಯಾತ್ಮಿಕ ಪ್ರಯಾಣಕ್ಕೆ ಸಹಾಯವಾಗದಿರುವ ಎಲ್ಲವನ್ನೂ ದೂರ ಎಸೆಯಲು ಈಗ ಎಲ್ಲ ಕಾರಣಗಳೂ ನಮಗಿವೆ. ಗುರೂಜಿಯವರು ಹೇಳುತ್ತಿದ್ದರು, "ನಾವು ಪರ್ವತಾರೋಹಣ ಮಾಡುವಾಗ ನಮ್ಮ ಎಲ್ಲ ವಸ್ತುಗಳನ್ನೂ ಹೊತ್ತೊಯ್ಯಲು ಆಗುವುದಿಲ್ಲ." ಆದರೆ ನಮಗೆ ಇಚ್ಛಾಸ್ವಾತಂತ್ರ್ಯವಿದೆ. ನಾವು ವಿಧಿಯನ್ನೇ ಬದಲಿಸುವಂತಹ ಚೈತನ್ಯಗಳನ್ನು ಮತ್ತು ಮಾಸ್ಟರ್‌ಗಳು ಕೊಟ್ಟಿರುವ ಮಾರ್ಗದರ್ಶನ ಮತ್ತು ಜ್ಞಾನವನ್ನು ಸ್ವೀಕರಿಸಬೇಕು, ಅಂತರ್ಗತಮಾಡಿಕೊಳ್ಳಬೇಕು ಹಾಗೂ ಜ್ಞಾನವನ್ನು ಬದುಕಿನಲ್ಲಿ ಅಭಿವ್ಯಕ್ತಗೊಳಿಸಬೇಕು. ಆಗ ನಾವು ಬದಲಾಗುತ್ತೇವೆ, ಜಗತ್ತೂ ಬದಲಾಗುತ್ತದೆ.

ನಮ್ಮ ಸಾಧನೆಗೆ ಹೆಚ್ಚು ಗಮನಹರಿಸುವ ಮೂಲಕ ನಾವು ಸಿದ್ಧರಾಗಬೇಕು. ಸಾಧನೆಯಲ್ಲಿ ಎರಡು ವಿಭಾಗಗಳಿವೆ – ಧ್ಯಾನ ಮತ್ತು ಸಕಾರಾತ್ಮಕ ಬದುಕು. ಧ್ಯಾನದ ವಿಭಾಗದಲ್ಲಿ, ನಮ್ಮಲ್ಲಿ ಶಿಸ್ತನ್ನು ತಂದುಕೊಳ್ಳಲು, ಆದ್ಯತೆಯ ಪ್ರಕಾರ ಕೆಲಸಕಾರ್ಯಗಳಲ್ಲಿ ತೊಡಗಲು, ಸಾಧನೆಗಾಗಿ ಹೆಚ್ಚು ಸಮಯ ಕಂಡುಕೊಳ್ಳಲು ನಮ್ಮ ಇಚ್ಛಾಶಕ್ತಿಯನ್ನು ಹೆಚ್ಚುಮಾಡಲು ಪ್ರಯತ್ನ ಬೇಕಾಗಬಹುದು. ನಮ್ಮ ಧ್ಯಾನದಲ್ಲಿನ ಗುಣಮಟ್ಟ ಹೆಚ್ಚಿಸಲು ನಮ್ಮ ಧ್ಯಾನಾಭ್ಯಾಸಗಳಿಗೆ ಹೆಚ್ಚು ಪ್ರೀತಿ ಸೇರಿಸಬೇಕು ಮತ್ತು ದೇವರಿಗಾಗಿ ನಾವು ಹೆಚ್ಚು ಹಂಬಲಿಸಬೇಕು. ಆದರೆ ಇದಕ್ಕಿಂತ ಬಹಳ ಹೆಚ್ಚಿನ ಪ್ರಯತ್ನ ಸಕಾರಾತ್ಮಕ ಬದುಕಿನ ವಿಭಾಗದಲ್ಲಿ ಬೇಕಾಗುತ್ತದೆಂದು ನಾನು ಭಾವಿಸುತ್ತೇನೆ – ಬೇರೆಯವರೊಂದಿಗೆ ಹೊಂದಿಕೊಳ್ಳಬೇಕು ಮತ್ತು ಅವರ ಸಕಾರಾತ್ಮಕ ಭಾಗಕ್ಕೆ ಸಂಪರ್ಕಗೊಳ್ಳಬೇಕು. ಅತ್ಯಂತ ಪ್ರಾಮಾಣಿಕ ನಿರ್ಧಾರದಿಂದ ನಾವು ಈ ಪ್ರಯಾಣದಲ್ಲಿ ಮುನ್ನಡೆದಾಗ ಎಲ್ಲ ಅಡಚಣೆಗಳು ಮಾಯವಾಗುತ್ತವೆ.

ಲೈಟ್ ಚಾನಲಿಂಗ್ ಸೆಷನ್ ನಡೆಸುವ ಅಥವ ಹೇಳಿಕೊಡುವ ಮತ್ತು ಅಭ್ಯಾಸಮಾಡುವ ಮೂಲಕ ಬೆಳಕನ್ನು ಹರಡುವ ಶ್ರೇಷ್ಠ ಕಾರ್ಯದಲ್ಲಿ ಭಾಗವಹಿಸಲು ಪ್ರತಿಯೊಬ್ಬ ಧ್ಯಾನಿಗೂ ಫೆಬ್ರವರಿ 1ನೇ ತಾರೀಖಿನಂದು ಆಚರಿಸುವ ವಿಶ್ವ ಚಾನಲ್ಸ್ ದಿನವು ಒಂದು ದೊಡ್ಡ ಅವಕಾಶವಾಗಿದೆ. ■

## ಹೊರಗಿನವರಿಗೆ ಧ್ಯಾನಕಲಿಕೆ

ಧ್ಯಾನದ ತರಗತಿಗಳಿಗೆ ಬರಲು ಸಾಧ್ಯವಿಲ್ಲದಿರು – ವವರಿಗೆ ಅಂಚೆ ಮತ್ತು ಇ–ಮೇಲ್‌ಗಳ ಮೂಲಕ ಧ್ಯಾನ ಕಲಿಸಲಾಗುವುದು. ಇಂಗ್ಲೀಷ್‌ನಲ್ಲಿ (ವರ್ಷಕ್ಕೆ ರೂ. 2500), ಕನ್ನಡ, ಮರಾಠಿ ಮತ್ತು ಹಿಂದಿಯಲ್ಲಿ (ವರ್ಷಕ್ಕೆ ರೂ. 1300) ಪಾಠಗಳನ್ನು ಕಳುಹಿಸಲಾಗುವುದು. ಭಾರತ ದೇಶದಿಂದ ಹೊರಗೆ ವಾಸವಾಗಿರುವ ವಿದ್ಯಾರ್ಥಿಗಳ ವಾರ್ಷಿಕ ರಿಜಿಸ್ಟ್ರೇಶನ್ ಫ್ಲೀಯು ರೂ. 4500. ಈ ಫೀನಲ್ಲಿ ವಾರ್ತಾಪತ್ರದ ಒಂದು ವರ್ಷದ ಚಂದಾದಾರಿಕೆ ಮತ್ತು ಪಠ್ಯಪುಸ್ತಕಗಳು ಸೇರಿದೆ.

ನಂತರ, ರಿಜಿಸ್ಟ್ರೇಶನ್‌ನ ವಾರ್ಷಿಕ ನವೀಕರಣದ ಫೀ ಇಂಗ್ಲೀಷ್ (ವರ್ಷಕ್ಕೆ ರೂ. 2000), ಕನ್ನಡ, ಮರಾಠಿ ಮತ್ತು ಹಿಂದಿಯಲ್ಲಿ (ವರ್ಷಕ್ಕೆ ರೂ. 900). ಭಾರತ ದೇಶದಿಂದ ಹೊರಗೆ ವಾಸವಾಗಿರುವ ವಿದ್ಯಾರ್ಥಿಗಳ ರಿಜಿಸ್ಟ್ರೇಶನ್‌ನ ವಾರ್ಷಿಕ ನವೀಕರಣದ ಫೀಯು ರೂ. 3500. ಈ ಫೀನಲ್ಲಿ ವಾರ್ತಾಪತ್ರದ ಒಂದು ವರ್ಷದ ಚಂದಾದಾರಿಕೆ ಸೇರಿದೆ.

- ★ ಎಲ್ಲಾ ಸೂಚನೆಗಳನ್ನು ಪೋಸ್ಟ್ ಅಥವಾ ಇ–ಮೇಲ್ ಮೂಲಕ (ಆಯ್ಕೆ ಮಾಡಿದಂತೆ) ಆಯಾ ಭಾಷೆಯಲ್ಲಿ ಕಳುಹಿಸಿ ಕೊಡಲಾಗುವುದು.
- ★ ಸೂಕ್ಷ್ಮ ಮಟ್ಟದಲ್ಲಿ, ಋಷಿಗಳು ದೀಕ್ಷೆಯನ್ನು ಕೊಡುತ್ತಾರೆ ಮತ್ತು ಸಾಧನೆಯ ಪ್ರಗತಿಯನ್ನು ಗಮನಿಸುತ್ತಾರೆ.
- ★ ನಮ್ಮ ಮಾರ್ಗ ಮತ್ತು ಸಾಧನೆಯನ್ನು ಸರಿಯಾಗಿ ಅರ್ಥಮಾಡಿಕೊಳ್ಳಲು ವಿದ್ಯಾರ್ಥಿಗಳು ನಮ್ಮ ಎಲ್ಲ ಪುಸ್ತಕಗಳನ್ನು ಓದಬೇಕು.
- ★ ಅಭ್ಯಾಸದ ವರದಿಗಳನ್ನು ಸಕಾಲಕ್ಕೆ ತಲುಪಿಸಬೇಕು. ಸಕಾಲಕ್ಕೆ ವರದಿ ಬಾರದಿದ್ದರೆ, ವಿದ್ಯಾರ್ಥಿ ಧ್ಯಾನ ಮಾಡುತ್ತಿಲ್ಲ ಎಂದು ಪರಿಗಣಿಸಲಾಗುತ್ತದೆ.

**ಚೆಕ್/ಡಿಡಿಗಳನ್ನು "ಮಾನಸ ಲೈಟ್ ಏಜ್ ಫೌಂಡೇಶನ್(ರಿ)" ಹೆಸರಲ್ಲಿ ಕಳುಹಿಸಬೇಕಾಗುತ್ತದೆ. ಬೆಂಗಳೂರೇತರ ಚೆಕ್‌ಗಳಿಗೆ 50ರೂ. ಹೆಚ್ಚಿಗೆ ಸೇರಿಸಬೇಕಾಗುತ್ತದೆ.**

### ಗುರೂಜಿಯವರಿಂದ ವಿಶೇಷ ಸೂಚನೆಗಳು

- ★ ತಾಳ್ಮೆ ಇರಲಿ. ಮೊದಲನೆಯ ದಿನವೇ ಸಮಾಧಿಯ ಅನುಭವವನ್ನು ನಿರೀಕ್ಷಿಸಬೇಡಿ. ಪವಾಡಗಳನ್ನು ನಿರೀಕ್ಷಿಸಬೇಡಿ. ನಾವು ಶ್ರದ್ಧೆಯಿಂದ ಸಾಧನೆಯನ್ನು ಮುಂದುವರಿಸಿದರೆ ಪವಾಡಗಳು ಸದ್ದಿಲ್ಲದೆ ನಡೆಯುತ್ತವೆ.
- ★ ಪ್ರತಿಯೊಬ್ಬರೂ ತಮ್ಮದೇ ರೀತಿಯಲ್ಲಿ ಸೆಣಸಾಟಗಳನ್ನೆದುರಿಸುತ್ತಾರೆ. ಆದರೆ ಸಾಧನೆ ಮುಂದುವರಿದಂತೆ ಎಲ್ಲ ಕರಗಿಹೋಗುತ್ತವೆ.
- ★ ಪ್ರತಿಯೊಬ್ಬರಿಗೂ ತಮ್ಮದೇ ಆದ ಅನುಭವಗಳಾಗುತ್ತವೆ. ಆದರೆ ಅವುಗಳ ಕಡೆ ಹೆಚ್ಚು ಗಮನ ಕೊಡಬಾರದು. ಅನುಭವಗಳು ಒಳ್ಳೆಯದು. ಆದರೆ ಅವು ಸಾಧನೆಯಲ್ಲಿ ಪ್ರಗತಿಯನ್ನು ಅಳೆಯುವುದಿಲ್ಲ.
- ★ ಧ್ಯಾನ ಮಾಡುವಾಗ, ಧ್ಯಾನದ ಕ್ರಿಯೆಗಳನ್ನು ವಿಶ್ಲೇಷಿಸಬಾರದು. ವಿಶ್ಲೇಷಣೆ ಧ್ಯಾನಕ್ಕೆ ಸಹಾಯ ಮಾಡುವುದಿಲ್ಲ.
- ★ ಧ್ಯಾನ ಮಾಡುವಾಗ, ಯೋಚನೆಗಳು ಸಾಮಾನ್ಯ. ಅದರಿಂದ ತಲೆಕೆಡಿಸಿ ಕೊಳ್ಳಬಾರದು. ಯೋಚನೆಗಳನ್ನು ಓಡಿಸಲು ಪ್ರಯತ್ನ ಮಾಡಬಾರದು. ಅವುಗಳನ್ನು ಗಮನಿಸದೆ ಇರುವುದು ಉತ್ತಮ. ಬೇರೆ ದಾರಿಯೇ ಇಲ್ಲ.

## ಅಮರ

ಸುನಿಲ್ ಬಿಸರಹಳ್ಳಿ; ಅನು: ಸುಧಾಕರ್

ಬೈಬಲ್ ಹೇಳುತ್ತದೆ, "ಪ್ರಾರಂಭದಲ್ಲಿ ಶಬ್ದವೊಂದು ಇತ್ತು, ಶಬ್ದ ಅವನೊಡನೆ ಇತ್ತು, ಮತ್ತು ಶಬ್ದವೇ ಅವನಾಗಿತ್ತು." ಪ್ರತಿಯೊಂದೂ ಆ ಶಬ್ದದೊಂದಿಗೆ ಪ್ರಾರಂಭವಾಯಿತು, ಆ ಶಬ್ದವು ಎಷ್ಟೊಂದು ಅನುರಣಿಸುತ್ತಿತ್ತೆಂದರೆ ಅದು ವಿಶ್ವವನ್ನೇ ಸೃಷ್ಟಿಸಿತು. ವಿಶ್ವದ ಚರಿತ್ರೆಯನ್ನು ಹಿಂದಿರುಗಿ ನೋಡಿದರೆ, ಇದೇ ತರಹದ ಪರಿಣಾಮವಿರುವ ಶಬ್ದಗಳು ಕೆಲವು ಮಾತ್ರ ಇರುವುದನ್ನು ಕಾಣುತ್ತೇವೆ. ಅವುಗಳಲ್ಲಿ ಒಂದು "ಅಮರ". ವ್ಯಕ್ತಿಯೊಬ್ಬನ ಕನಸು ಏನೆಲ್ಲವನ್ನು ಸಾಧಿಸಬಲ್ಲದು ಎನ್ನುವುದಕ್ಕೆ ಅಮರ ಒಂದು ಉಜ್ವಲ ಉದಾಹರಣೆ.

ಗುರೂಜಿ ಒಮ್ಮೆ ಹೇಳಿದರು, "ಅಮರ ಒಬ್ಬ ಕನಸುಗಾರ. ಅವರ ಕನಸಿನಂತೆಯೇ ನಾವೀಗ ಜೀವನ ನಡೆಸುತ್ತಿದ್ದೇವೆ". ಅಮರರವರ ಆಲೋಚನಾ ಶಕ್ತಿ ಎಷ್ಟು ಉತ್ಕಟವಾಗಿತ್ತೆಂದರೆ, ಅದು ಒಂದು ಪೀಳಿಗೆಯೇ ಬೇರೆ ರೀತಿಯಲ್ಲಿ ಅಂದರೆ ಉದಾತ್ತ ರೀತಿಯಲ್ಲಿ ಯೋಚಿಸುವಂತೆ ಮತ್ತು ಕಾರ್ಯನಿರ್ವಹಿಸುವಂತೆ ಪ್ರಭಾವ ಬೀರುತ್ತಿತ್ತು. ಪ್ರತಿ ಜನ್ಮದಲ್ಲೂ, ಅವರು ಗೋರ ಕುಂಬಾರ ಆಗಿಯೋ ಅಥವ ಸಂತ ಏಕನಾಥ್ ಆಗಿಯೋ ಜನರ ವಿಚಾರ ಮತ್ತು ಬದುಕಿನ ಮೇಲೆ ಅಮೂಲಾಗ್ರ ಬದಲಾವಣೆಯ ಪ್ರಭಾವ ಬೀರಿದರು. ಕುರುಡು ಆಚಾರಗಳಿಗೆ ಮತ್ತು ಸಾಂಪ್ರದಾಯಿಕ ವಿಚಾರಗಳಿಗೆ ತಲೆಬಾಗಲು ಒಪ್ಪಿಕೊಳ್ಳದ ಅವರು ಸರ್ವೇಸಾಮಾನ್ಯ ತಿಳುವಳಿಕೆಗಳನ್ನು ಮತ್ತು ಆಚರಣೆಯಲ್ಲಿದ್ದ ಅಭ್ಯಾಸಗಳನ್ನು ಯಾವಾಗಲೂ ಪ್ರಶ್ನಿಸಿದರು. ಆ ಚಿಂತನೆಗಳ ಮತ್ತು ಆಚರಣೆಗಳ ಸಾರವನ್ನು ಸಂಗ್ರಹಿಸಿ ಬೇಡವಾದದ್ದನ್ನು ಹೊರಗೆಸೆದರು. ಅವರು ಮೂಲಭೂತ ತತ್ತ್ವಗಳ ಬಗ್ಗೆ ಮಾತನಾಡಿದರು.

ಮೊದಲ ಬಾರಿಗೆ ಗುರೂಜಿಯವರು ಅಮರರವರನ್ನು ನೋಡಿದಾಗ, ಗುರೂಜಿಯವರಿಗೆ ಹಿಮಾಲಯ ಪರ್ವತಗಳ ನೆನಪಾಯಿತು. ಅವರು ಯಾವಾಗಲೂ ಉದಾತ್ತವಾದ, ಭವ್ಯವಾದ ಮತ್ತು ಮಹಾನ್ ವ್ಯಕ್ತಿಯಾಗಿದ್ದರು. ಆಕಾಶದಷ್ಟು ವಿಶಾಲವಾದ ಮತ್ತು ಸಾಗರದಷ್ಟು ಆಳವಾದ ಜ್ಞಾನ ಹೊಂದಿದ್ದರೂ ಅವರು ವಿನೀತರಾಗಿದ್ದರು. ಅವರು ಪರಿಪೂರ್ಣರು. ಗುರೂಜಿಯವರು ಹೇಳಿದರು, "ಅವರಲ್ಲಿದ್ದ ಅನೇಕ ಸಾಮರ್ಥ್ಯಗಳಲ್ಲಿ, ಎರಡು ಪ್ರಮುಖ ವಿಷಯಗಳಲ್ಲಿ ಅಮರರವರು ವಿಶೇಷ ಪರಿಣತಿಯನ್ನು ಪಡೆದಿದ್ದರು. ಭೌತಿಕ ಮಟ್ಟದಲ್ಲಿ, ಬೋಧನೆಗಳನ್ನು ಮತ್ತು ಧರ್ಮಗ್ರಂಥಗಳನ್ನು ಸರಳಗೊಳಿಸಿ ಅದು ಸಾಮಾನ್ಯ ವ್ಯಕ್ತಿಗೂ ತಲುಪುವಂತೆ ಮಾಡುವುದರಲ್ಲಿ ಅವರು ಪರಿಣಿತರು. ಸೂಕ್ಷ್ಮ ಮಟ್ಟದಲ್ಲಿ, ಆಕಾಶಯಾನದಲ್ಲಿ ಅವರು ಸಿದ್ಧಹಸ್ತರು. ಸರಿಯಾದ ದಿಕ್ಕಿನಲ್ಲಿ ಮತ್ತು ಅತ್ಯಂತ ವೇಗವಾಗಿ ಅವರನ್ನು ಕೊಂಡೊಯ್ಯುವ ಆಂತರಿಕ ವ್ಯವಸ್ಥೆಯೊಂದು ಅವರಲ್ಲಿತ್ತು."

ಅಮರರವರು ಒಬ್ಬ ಶಿಕ್ಷಕ ಅಥವ ಸೂಕ್ಷ್ಮಯಾನ ಪ್ರಯಾಣಿಕರಷ್ಟೇ ಆಗಿರಲಿಲ್ಲ ಅವರೊಬ್ಬ ಮಹರ್ಷಿ. ದೇವರ ಮತ್ತು ಅವನ ನಿಯಮಗಳ ಕಡೆಗೆ ಜಗತ್ತನ್ನು ಮಾರ್ಗದರ್ಶಿಸುವ ಮತ್ತು ಶ್ರುತಿಗೊಳಿಸುವ, ವಿಶ್ವದ ಇತಿಹಾಸದಲ್ಲಿ ಬೇರೆ ಬೇರೆ ಸಮಯದಲ್ಲಿ ಬರುವ ಮೌನ ಕಿಡಿಯೇ ಅಮರರವರು. ಅವರ ಬಗ್ಗೆ ಗುರೂಜಿಯವರು ಮಾತನಾಡಿದಾಗಲೆಲ್ಲ ಅವರ ಕಣ್ಣಿನಲ್ಲಿ ಪ್ರೀತಿ ಮತ್ತು ಭಾವುಕತೆಯ ಬೆಳಕು ಎದ್ದುಕಾಣುತ್ತಿತ್ತು. ಗುರೂಜಿಯವರು ಅಮರರವರೊಂದಿಗೆ ಯಾವಾಗಲೂ ಸಂಪರ್ಕದಲ್ಲಿರುತ್ತಿದ್ದರು. ಅವರಿಗೆ ಅಮರರವರು ಸರ್ವಸ್ವವೂ ಆಗಿದ್ದರು. ■

## ಮಹಾನ್ ಕೊಡುಗೆ – ಅಮರ

ಉಷಾ ಸತೀಶ್‌ಚಂದ್ರ; ಅನು: ಪಾಂಡುರಂಗ

ಅಮರ ಜಯಂತಿ ಕೇವಲ ಒಬ್ಬ ವ್ಯಕ್ತಿಯ ಜನನವನ್ನು ಸಂಕೇತಿಸುವುದಿಲ್ಲ, ಅದು ಒಂದು ಕನಸಿನ ಜನನ, ಮತ್ತು ಇಡೀ ಮನುಕುಲಕ್ಕಾಗಿ ಹೊಸ ಯುಗ ನಿರ್ಮಾಣದ ದೃಷ್ಟಿಯ ಜನನ. ಅಮರ ಅವರ ಕನಸು ಋಷಿಗಳ ಕನಸೇ ಆಗಿತ್ತು. ಋಷಿಗಳ ಮಾತುಗಳನ್ನು ಅಮರ ಅವರು ಆತ್ಮ ಮಟ್ಟದಿಂದ ಒಪ್ಪಿಕೊಂಡರು, ಮತ್ತು ಅವರು ಹೇಳಿದರು – ಒಂದು ವೇಳೆ ನಾವು ಇದನ್ನು ಮಾಡದಿದ್ದರೆ, ನಮಗೆ ದೇವರ ಮುಂದೆ ಶರಣಾಗತರಾಗಲು ಸಾಧ್ಯವಾಗುವುದಿಲ್ಲ. "ದೇವರಲ್ಲಿ ಬೇರೂರುವುದು ಸಾಧನೆಯ ಅಂತಿಮ ಹಂತ," ಎಂದು ಅವರು ನಂಬಿದ್ದರು. ಇಂಥ ಮಹಾನ್ ದೂರದೃಷ್ಟಿಯ ನಿರ್ಮಾಣದ ಜವಾಬ್ದಾರಿಯನ್ನು ತೆಗೆದುಕೊಳ್ಳುವಂಥ ಸಂಘಟಕರನ್ನು ನಿರ್ಮಾಣ ಮಾಡುವುದೇ ಅಮರರವರ ಕನಸಾಗಿತ್ತು.

ನಾವು ಇಲ್ಲಿ ಸೇರಿರುವುದೇ ಅಮರ ಅವರ ಕನಸನ್ನು ಬಲಗೊಳಿಸಲೆಂದು. ಈ ಪ್ರಕ್ರಿಯೆಯಲ್ಲಿ, ನಮ್ಮ ನಡವಳಿಕೆ ಮತ್ತು ಮನೋಧರ್ಮವನ್ನು ಉತ್ತಮಗೊಳಿಸಿಕೊಳ್ಳುತ್ತಾ ನಾವು ಬೆಳೆಯುತ್ತೇವೆ. ಇಂಥ ಪ್ರತಿಯೊಂದು ಸಂದರ್ಭದಲ್ಲಿ, ನಮ್ಮೊಳಗೆ ಅಮರ ಅವರನ್ನು ಸ್ವೀಕರಿಸಿಕೊಳ್ಳಲು ನಾವು ಪ್ರಜ್ಞಾಪೂರ್ವಕವಾಗಿ ಆಂತರಿಕ ಸಿದ್ಧತೆ ಮಾಡಿಕೊಳ್ಳುತ್ತೇವೆ. ಅಮರರವರ ಮುಂದೆ ಕುಳಿತು ಪ್ರಾರ್ಥನೆ ಮಾಡಿದಾಗ, ನಮ್ಮಲ್ಲಿ ಹುದುಗಿರುವ ಸಾಮರ್ಥ್ಯಗಳನ್ನು ಮತ್ತು ಪ್ರೀತಿಯನ್ನು ನಮ್ಮೊಳಗಿಂದ ಹೊರತರಲು ಅವರಿಗೆ ಸಾಧ್ಯವಿದೆ. ಅಮರ ಅವರ ಗುಣಗಳನ್ನು ಹೊರಹೊಮ್ಮಿಸುವ ಒಂದು ಮಟ್ಟಕ್ಕೆ ನಾವು ಸ್ಥಿತ್ಯಂತರಗೊಳ್ಳುತ್ತೇವೆ. ಈ ಅಭಿವ್ಯಕ್ತಗೊಳಿಸುವಿಕೆ ಸ್ವಯಂಚಾಲಿತವಾದದ್ದು ಮತ್ತು ಸಹಜ ಎಂದೆನಿಸಿದರೂ, ನಮ್ಮೊಳಗೆ ಅಮರ ಅವರನ್ನು ಸ್ವೀಕರಿಸಿಕೊಳ್ಳಲು ಮತ್ತು ಅವರ ಕನಸುಗಳು ನಮ್ಮಲ್ಲಿ ಜೀವಂತವಾಗಿರುವಂತೆ ನೋಡಿಕೊಳ್ಳಲು ನಾವು ಪ್ರಯತ್ನ ಮಾಡಬೇಕು. ಅಮರ ಅವರು ನಮಗೆ ಯಾವಾಗಲೂ ಅಸಾಧಾರಣ ಕೊಡುಗೆಗಳನ್ನು ಕೊಡುತ್ತಾರೆ. ನಾವು ಅವರಿಂದ ಸ್ವೀಕರಿಸಬಹುದಾದ ಅದ್ಭುತ ಕೊಡುಗೆಯೆಂದರೆ ಅವರನ್ನೇ ಸ್ವೀಕರಿಸುವುದಾಗಿದೆ – ಅವರ ಕನಸುಗಳು, ದೂರದೃಷ್ಟಿ, ಚೈತನ್ಯಗಳು, ಜ್ಞಾನ ಮತ್ತು ಅವರ ಅನುಭವಗಳು. ಅಮರ ಅವರು ಚಾನಲ್ ಆಗಿರಲಿಲ್ಲ. ಅವರು ನೇರವಾಗಿ ಜ್ಞಾನವನ್ನು ಸಂಗ್ರಹಿಸುತ್ತಿದ್ದರು. ಅವರು ಅತ್ಯುನ್ನತ ಸೂಕ್ಷ್ಮ ಪ್ರಯಾಣಿಕರು ಆಗಿದ್ದರು. ಅಂಥ ಮಹಾನ್ ಮಾಸ್ಟರ್‌ರಿಂದ ನಾವು ಏನೆಲ್ಲವನ್ನು ಸ್ವೀಕರಿಸುವುದಕ್ಕೆ ಸಾಧ್ಯವೆಂದು ಅರಿಯಲು ಸಾಧ್ಯವಾಗಲಾರದು!

ಅಮರರವರನ್ನು ನಮಗೆ ಗುರುವಾಗಿ, ಮತ್ತು ತಂದೆಯಾಗಿ ಕರೆತರುವುದು ಗುರೂಜಿಯವರ ಮುಖ್ಯವಾದ ಕೆಲಸವಾಗಿತ್ತು. ಅಮರ ಮತ್ತು ಅಮರರವರ ಕನಸುಗಳಿಗಾಗಿ ಗುರೂಜಿ ಅನೇಕ ವಿಷಯಗಳನ್ನು ತ್ಯಾಗ ಮಾಡಬೇಕಾಯಿತು. ಅಮರ ಅವರ ಕನಸನ್ನು ಜೀವಂತವಾಗಿ ಉಳಿಸುವ ನಮ್ಮ ಒಂದು ವಿನೀತ ಪ್ರಯತ್ನವೇ 'ವಿಶ್ವ ಚಾನಲ್ಸ್ ದಿನ'ದ ಆಚರಣೆ. ಎಲ್ಲ ಮಟ್ಟಗಳಲ್ಲೂ ಮತ್ತು ಎಲ್ಲ ಸ್ತರಗಳಲ್ಲೂ ಸ್ವರ್ಗವನ್ನೇ ಕೆಳಗೆ ತರುವ ಸಿದ್ಧತೆಗಳು ನಡೆಯುತ್ತಿವೆ! ಹೊಸ ಯುಗದ ಉದಯವನ್ನು ಸಾರುವುದಕ್ಕಾಗಿ, ಪ್ರಶಾಂತತೆ ಮತ್ತು ಶಾಂತಿಯನ್ನು ತುಂಬಿಕೊಳ್ಳಲು ವಾತಾವರಣವು ಮೌನದಲ್ಲಿ ಸಿದ್ಧಗೊಳ್ಳುತ್ತಿರುವಾಗಲೇ, ಅಮರ ಜಯಂತಿ ಒಂದು ರೀತಿಯಲ್ಲಿ ಬದುಕಿನ ವಿಶ್ವವ್ಯಾಪಿ ಸಂಭ್ರಮವಾಗಿದೆ! ■

## ಪ್ರಶ್ನೆಗಳು ಮತ್ತು ಉತ್ತರಗಳು

ಸಂ: ಶೋಭಾ ಕೆ. ರಾವ್; ಅನು: ಪಾಂಡುರಂಗ

**ಪ್ರ: ನಿಮಗೆ ಧ್ಯಾನದಲ್ಲಿ ದೇವರು ಮತ್ತು ಋಷಿಗಳು ಕಾಣಿಸಿಕೊಳ್ಳುತ್ತಾರೆಯೇ?**

ಉ: ಅಪರೂಪಕ್ಕೊಮ್ಮೆ. ನಾನು ಅವರನ್ನು ನೋಡುವುದಿಲ್ಲ, ಆದರೆ ಅವರ ಅನುಭವ ಪಡೆಯುತ್ತೇನೆ. ಮತ್ತು ಪ್ರತಿ ಬಾರಿಯೂ ಅವರ ಇರುವಿಕೆಯ ಅರಿವಾಗುತ್ತದೆ; ಕೇವಲ ಧ್ಯಾನದ ಸಮಯದಲ್ಲಷ್ಟೇ ಅಲ್ಲದೆ ಬೇರೆ ಸಮಯಗಳಲ್ಲೂ.

**ಪ್ರ: ಒಂದು ವೇಳೆ ನಾನು ಸೂಕ್ಷ್ಮ ಮಟ್ಟದಲ್ಲಿ ಬ್ಲಾಕ್ ಹೋಲ್‌ಗೆ ಪ್ರಯಾಣಿಸಿದರೆ, ನನ್ನನ್ನು ಸೆಳೆದುಕೊಂಡು ಬಿಡುತ್ತದೆಯೇ?**

ಉ: ಸೂಕ್ಷ್ಮ ಮಟ್ಟದ ಪ್ರಯಾಣ ಮತ್ತು ಅದನ್ನು ನೆನಪು ಮಾಡಿಕೊಳ್ಳುವುದು ಅಷ್ಟು ಸುಲಭವಲ್ಲ. ಸೂಕ್ಷ್ಮ ಮಟ್ಟದ ಪ್ರಯಾಣ ಇಷ್ಟವೆಂದು ಋಷಿ ಸವಾರಿಯಂತೆ ಮಾಡುವುದಕ್ಕೆ ಆಗುವುದಿಲ್ಲ. ಸೂಕ್ಷ್ಮ ಮಟ್ಟದ ಪ್ರಯಾಣಕ್ಕೆ ಒಂದು ಉನ್ನತ ಉದ್ದೇಶವಿರಬೇಕು – ಪ್ರಪಂಚದ ಒಳಿತಿಗೆ ಸಂಬಂಧಪಟ್ಟ ಕೆಲಸವಾಗಿರಬೇಕು ಅಥವಾ ಬೇರೆ ತಾರಾ ಮಂಡಲದಲ್ಲಿರುವ ಋಷಿಯನ್ನು ಭೇಟಿ ಮಾಡುವುದಾಗಿರಬೇಕು ಅಥವಾ ಋಷಿಗಳ ಕೆಲಸಕ್ಕಾಗಿ ದೇವರುಗಳನ್ನು ಭೇಟಿ ಮಾಡುವುದಾಗಿರಬೇಕು.

**ಪ್ರ: ಬಣ್ಣದಿಂದ ಕೂಡಿದ ಕನಸುಗಳು ಸೂಕ್ಷ್ಮ ಮಟ್ಟದ ಪ್ರಯಾಣಗಳೇ?**

ಉ: ಇಲ್ಲ. ಕೆಲವೊಮ್ಮೆ ಕನಸುಗಳೇ ಬಣ್ಣ ಬಣ್ಣದ್ದಾಗಿರುತ್ತವೆ. ಯಾವಾಗಲೂ ಆ ಕನಸುಗಳು ಸೂಕ್ಷ್ಮ ಮಟ್ಟದ ಅನುಭವಗಳಾಗಿರುವುದಿಲ್ಲ. ಸೂಕ್ಷ್ಮ ಮಟ್ಟದ ಪ್ರಯಾಣದ ಬಗ್ಗೆ ತಿಳಿದುಕೊಳ್ಳಲು ಬಹಳಷ್ಟು ಸಮಯ ಬೇಕಾಗುತ್ತದೆ.

**ಪ್ರ: ನಮಗೆ ನಿಶ್ಚಲತೆಯ ಅನುಭವವಾದಾಗ ಹೀಲಿಂಗ್ ಆಗುತ್ತದೆಯೇ?**

ಉ: ಬಹುಶಃ ಆಗಬಹುದು. ನನಗೆ ಗೊತ್ತಿಲ್ಲ. ಆದರೆ ಶಾರೀರಕ ವ್ಯವಸ್ಥೆಯಲ್ಲಿ ನಮಗೆ ಗೊತ್ತಿರದ ಅನೇಕ ಪ್ರಕ್ರಿಯೆಗಳು ನಡೆಯುತ್ತವೆಂದು ನಾನು ನಂಬಿದ್ದೇನೆ. ಇದನ್ನು ಅರ್ಥ ಮಾಡಿಕೊಳ್ಳಲು ಬಹಳಷ್ಟು ಅಧ್ಯಯನ ಮಾಡಬೇಕು.

**ಪ್ರ: ಸಾವಿನ ನಂತರ ಪ್ರಾಣಿಗಳ ಆತ್ಮಗಳು ಎಲ್ಲಿಗೆ ಹೋಗುತ್ತವೆ?**

ಉ: ಅವು ತಮ್ಮ ಮೂಲ ಸ್ಥಳವಾದ ಬ್ರಹ್ಮ ಲೋಕಕ್ಕೆ ಹಿಂದಿರುತ್ತವೆ ಮತ್ತು ಇದೇ ಅವುಗಳ ಮುಕ್ತಿ.

**ಪ್ರ: ಮೆಡಿಕಲ್ ಚೆಕ್ ಅಪ್ ನಡೆಯುತ್ತಿರುವಾಗ, ಉದಾಹರಣೆಗೆ ECG ಅಥವ ರಕ್ತ ಪರೀಕ್ಷೆ ನಡೆಯುತ್ತಿರುವಾಗ, ನಾವು ಲೈಟ್ ಚಾನಲ್ ಮಾಡಿದರೆ, ಪರೀಕ್ಷೆಗಳ ಫಲಿತಾಂಶಗಳ ಮೇಲೆ ಅದು ಪ್ರಭಾವ ಬೀರುತ್ತದೆಯೇ?**

ಉ: ಇಲ್ಲ. ರಕ್ತದಲ್ಲಿನ ಸಕ್ಕರೆ ಪ್ರಮಾಣ ಹೆಚ್ಚಿಗೆ ಇದ್ದರೆ, ನೀವು ಬೆಳಕನ್ನು ಕಳಿಸಿದಾಗಲೂ ಅದು ಹೆಚ್ಚಾಗಿಯೇ ಇರುತ್ತದೆ.

**ಪ್ರ: ನಾನು ಬುದ್ಧಿಜೀವಿಗಳ ಜೊತೆಯಲ್ಲಿದ್ದಾಗ ನನ್ನಲ್ಲಿ ಕೀಳರಿಮೆ ಉಂಟಾಗುವುದನ್ನು ಹೇಗೆ ತಡೆಗಟ್ಟಬಹುದು?**

ಉ: ಬುದ್ಧಿಜೀವಿಗಳು ಖಂಡಿತವಾಗಿ ಚೆನ್ನಾಗಿಯೇ ಮಾತನಾಡುತ್ತಾರೆ. ಅವರಿಗೆ ಭಾಷೆ ತಿಳಿದಿದೆ ಮತ್ತು ಅವರು ತಾರ್ಕಿಕವಾಗಿ ಮತ್ತು ಮೆಚ್ಚಿಗೆಯಾಗುವಂತೆ ಮಾತನಾಡುತ್ತಾರೆ. ಆದರೆ ಧ್ಯಾನಿ ಒಬ್ಬ ಅನುಭಾವಿ. ಅವರು ಬುದ್ಧಿ ಜೀವಿಗಳು ಪ್ರವೇಶಿಸಲಾಗದ ಕ್ಷೇತ್ರಗಳಿಗೆ ಪ್ರವೇಶಿಸಬಲ್ಲರು. ಆದಕಾರಣ ಒಬ್ಬ ಧ್ಯಾನಿ ಧ್ಯಾನದ ಮೂಲಕ ಪಡೆದುಕೊಳ್ಳುವ ಜ್ಞಾನ, ಅಥವಾ ಬೇರೆ ಯಾವುದಾದರೂ ಅತೀಂದ್ರಿಯ ಟೆಕ್ನಿಕ್ ಮೂಲಕ ಪಡೆದುಕೊಳ್ಳುವ ಜ್ಞಾನ ಹೆಚ್ಚಿರುತ್ತದೆ ಮತ್ತು ಅದರಲ್ಲಿ ಸ್ಪಷ್ಟತೆಯಿರುತ್ತದೆ. ನೀವು ಇದನ್ನು ಅರ್ಥ ಮಾಡಿಕೊಂಡರೆ, ನಿಮಗೆ ಕೀಳರಿಮೆ ಉಂಟಾಗುವುದಿಲ್ಲ.

**ಪ್ರ: ಸಾಧನೆಯಲ್ಲಿ ಸಮಾಧಿಯ ಅನುಭವ ಪಡೆಯುವುದು ಎಷ್ಟು ಮುಖ್ಯ?**


ಉ: ಬಹಳ ಮುಖ್ಯ. ಒಬ್ಬ ಧ್ಯಾನಿಯ ಮೊದಲ ಗುರಿಯೇ ಸಮಾಧಿಯ ಅನುಭವ ಪಡೆಯುವುದಾಗಿರಬೇಕು. ಇದೇ ಮೊದಲ ಪ್ರವೇಶ ದ್ವಾರ ಅಥವಾ ಪ್ರಥಮ ಹೆಜ್ಜೆ. ಸಮಾಧಿಯ ಅನುಭವ ಪಡೆಯದಿದ್ದರೆ, ನಾವು ಸಾಧನೆಯಲ್ಲಿ ಮುಂದುವರಿಯುವುದಕ್ಕೆ ಸಾಧ್ಯವಿಲ್ಲ. ಸಮಾಧಿಯ ಅನುಭವವಾದಾಗ ನಮಗೆ ದೈವದ ಮೊದಲ ಕ್ಷಣಿಕ ದರ್ಶನವಾಗುತ್ತದೆ. ಈ ಮೊದಲ ದರ್ಶನದಲ್ಲಿ ಪರಿಪೂರ್ಣ ಶಾಂತಿ, ಪರಿಪೂರ್ಣತೆ, ದೈವೀ ಪ್ರೀತಿ ಮತ್ತು ಏಕತೆಯ ಅನುಭವಗಳು ಆಗಬಹುದು. ಸಮಾಧಿಯ ಅನುಭವವಾದಾಗ ನಿಮಗೆ ಸತ್ಯದ ಅರಿವಾಗುತ್ತದೆ. ಸಮಾಧಿಯ ಅನುಭವ ಪಡೆಯದಿದ್ದಲ್ಲಿ ನಾವು ಉನ್ನತ ಸತ್ಯಗಳನ್ನು, ಉನ್ನತ ವಾಸ್ತವಗಳನ್ನು ಅರ್ಥ ಮಾಡಿಕೊಳ್ಳಲಾರೆವು; ನಾವು ದಿನ ನಿತ್ಯದ ಜೀವನವನ್ನು ಸಮರ್ಪಕವಾಗಿ ನಡೆಸಲಾರೆವು.

**ಪ್ರ: ನಿಮ್ಮ ಪ್ರಕಾರ ಈ ಕ್ಷಣದಲ್ಲಿ ಜೀವಿಸುವುದು ಅಂದರೆ ಏನು?**

ಉ: ನಮ್ಮೊಳಗೆ ಮತ್ತು ನಮ್ಮ ಸುತ್ತ ಮುತ್ತ ದೇವರು ಇದ್ದಾನೆ. ನಮಗೆ ಸಹಾಯ ಮಾಡುವುದಕ್ಕೆ, ರಕ್ಷಿಸುವುದಕ್ಕೆ ಮತ್ತು ಮಾರ್ಗದರ್ಶಿವುದಕ್ಕೆ ಎಲ್ಲ ಸಮಯದಲ್ಲೂ ಅವನಿದ್ದಾನೆ. ಆದರೆ ನಮಗೆ ಬಹಳಷ್ಟು ಸಮಯ ಇದರ ಅರಿವಿರುವುದಿಲ್ಲ. ದೇವರು ಕೇವಲ ದೇವಸ್ಥಾನಗಳಲ್ಲಿ ಮಾತ್ರ ಇದ್ದಾನೆಂದು ನಾವು ತಿಳಿದಿರುತ್ತೇವೆ. ಈಗ ನಾವು ಸಾಧನೆಯ ಉನ್ನತ ಹಂತಗಳನ್ನು ಪ್ರವೇಶಿಸುತ್ತಿದ್ದೇವೆ. ಈ ಎಲ್ಲ ವಿಷಯಗಳ ಅರಿವು ನಮಗಿರಬೇಕು. ಈ ಕ್ಷಣದಲ್ಲಿ ಜೀವಿಸುವುದೆಂದರೆ, ನಾವು ನಮ್ಮ ದಿನ ನಿತ್ಯದ ಬಿಡುವಿಲ್ಲದ ಜೀವನದಲ್ಲಿ ತೊಡಗಿಕೊಂಡಿರುವಾಗಲೂ, ದೇವರ ಈ ಇರುವಿಕೆಯ ಅರಿವಿನಿಂದಿರುವುದೇ ಆಗಿದೆ. ಇದು ಕೇವಲ ಈ ಕ್ಷಣದಲ್ಲಿ ಜೀವಿಸುವುದು ಅಲ್ಲ, ಆದರೆ ದೇವರ ಇರುವಿಕೆಯ ಅರಿವಿನಲ್ಲಿ ಜೀವಿಸುವುದು. ಇದು ನಮಗೆ ಪರಿಪೂರ್ಣತೆಯನ್ನು ತಂದು ಕೊಡುತ್ತದೆ. ■


## ನಮ್ಮ ಪ್ರಕಟಣೆಗಳು

| | |
|---|---|
| Doorways to Light | 200/- |
| New Age Realities | 200/- |
| Higher Communication & Other Realities | 100/- |
| Light Body & Other Realities | 100/- |
| Master-Pupil Talks | 60/- |
| Master-Pupil Talks - Vol 2 | 75/- |
| iGuruji Vol 1,3,4 & 7 | each 150/- |
| iGuruji - Vol 2 | 120/- |
| iGuruji - Vol 5 | 100/- |
| iGuruji - Vol 6 | 75/- |
| Living in the Light of My Guru | 220/- |
| How to Meditate | 50/- |
| Dhyana Yoga | 50/- |
| Descent of Soul | 50/- |
| Practising Shambala Principles | 50/- |
| Astral Ventures of A Modern Rishi | 50/- |
| Channelled Knowledge from the Rishis-Vol 2 | 150/- |
| Channelled Knowledge from the Rishis-Vol 3 & 4 | each 200/- |
| Guruji Speaks Part - I & II | each 200/- |
| Guruji Speaks (Vol 3) | 150/- |
| Guruji Speaks (Vol 4) | 250/- |
| Guruji Speaks (Vol 5 & 7) | each 200/- |
| The Book of Reflections - Vol 1 & 2 | each 200/- |
| The Book of Reflections - Vol 3 | 150/- |
| Meditators on Meditations | 75/- |
| Meditators on Experiences | 75/- |
| Meditational Experiences - Vol 1 & 2 | each 150/- |
| Awareness | 60/- |
| Living in Light | 10/- |
| Light | 10/- |
| Quotes from the Rishis - Vol 1 & 2 | each 100/- |
| Pyramid Revelations | 100/- |
| Thus Spoke Guruji Krishnananda - Vol 1 | 200/- |
| Thus Spoke Guruji Krishnananda - Vol 2 | 250/- |
| ಬೆಳಕಿಗೆ ಬಾಗಿಲುಗಳು | 150/- |
| ಋಷಿಗಳಿಂದ ಬಂದ ಜ್ಞಾನ | 150/- |
| ಋಷಿಗಳಿಂದ ಬಂದ ಜ್ಞಾನ – ಭಾಗ 2 | 150/- |
| ಗುರು–ಶಿಷ್ಯರ ಸಂಭಾಷಣೆ | 60/- |
| ಐ–ಗುರೂಜಿ ಭಾಗ 1 | 150/- |
| ಐ–ಗುರೂಜಿ ಭಾಗ 2 | 120/- |
| ಹೊಸ ಯುಗದ ವಾಸ್ತವಗಳು | 120/- |
| ಉನ್ನತ ಸಂಪರ್ಕಗಳು | 100/- |
| ಅನಿಸಿಕೆಗಳು | 120/- |
| ಧ್ಯಾನ ಮಾಡುವುದು ಹೇಗೆ | 50/- |
| ಧ್ಯಾನ ಯೋಗ | 50/- |
| ಆತ್ಮದ ಅವರೋಹಣ | 50/- |
| ಶಂಬಲ ನಿಯಮಗಳ ಅಭ್ಯಾಸ | 50/- |
| ಆಧುನಿಕ ಋಷಿಯೊಬ್ಬರ ಅತೀಂದ್ರಿಯ ಸಾಹಸಗಳು | 50/- |
| ಗುರೂಜಿ ನಾ ಕಂಡಂತೆ | 30/- |
| ಬೆಳಕಿನಲ್ಲಿ ಬದುಕುವುದು | 10/- |
| ಬೆಳಕು | 10/- |
| ದೈವಸಾಕ್ಷಾತ್ಕಾರಕ್ಕೆ ರಾಮಕೃಷ್ಣರ ಮಾರ್ಗದರ್ಶನ | 250/- |
| ಕಾವ್ಯಕಂಠ ವಸಿಷ್ಠ ಗಣಪತಿ ಮುನಿಗಳು | 100/- |
| ಆನೇಕಲ್ಲಿನ ಅಪರೂಪದ ವ್ಯಕ್ತಿಗಳು | 120/- |
| ಬೆಳಕಿನ ಶರೀರ ಮತ್ತು ಇತರ ವಾಸ್ತವಗಳು | 100/- |
| प्रकाशवाट (Marathi) | 150/- |
| आयगुरूजी (Marathi) | 100/- |
| ध्यान कसे करावे (Marathi) | 50/- |
| ध्यानयोग (Marathi) | 50/- |
| आत्म्याचे पृथ्वीवर अवतरण (Marathi) | 50/- |
| शंबला तत्वांचा अभ्यास (Marathi) | 50/- |
| एका आधुनिक ऋषीचे सूक्ष्मजगातील पराक्रम (Marathi) | 50/- |
| प्रकाशमय जीवन (Marathi) | 10/- |
| प्रकाश (Marathi) | 10/- |
| उच्चस्तरीय संवाद आणि इतर सत्ये (Marathi) | 100/- |
| गुरु-शिष्य संवाद (Marathi) | 60/- |
| ध्यान कैसे करे (Hindi) | 50/- |
| ध्यान-योग (Hindi) | 50/- |
| प्रकाश (Hindi) | 10/- |
| प्रकाशमय जीवन (Hindi) | 10/- |
| प्रकाश की ओर (Hindi) | 150/- |
| आत्मा का अवतरण (Hindi) | 50/- |
| தியானம் செய்வது எப்படி | 50/- |
| ஒளியின் வாயில்கள் | 200/- |
| தியான யோகம் | 50/- |
| ஆத்மாவின் அவரோகணம் | 50/- |
| நவீன ரிஷி ஒருவரின் சூஷ்ம சாகசங்கள் | 50/- |
| சம்பலா நியமங்களின் அப்பியாசங்கள் | 50/- |
| ధ్యానం చేయ్యడం ఎలా | 50/- |
| కాంతికి ద్వారములు | 100/- |



**ಗುರೂಜಿ ಕೃಷ್ಣಾನಂದ (1939 - 2012)**

## ಮಾನಸ ಫೌಂಡೇಶನ್ (ರಿ)

1988ರಲ್ಲಿ ಗುರೂಜಿ ಕೃಷ್ಣಾನಂದರಿಂದ ಸ್ಥಾಪನೆಯಾದ ಈ ಸಂಸ್ಥೆ ಜ್ಯೋತಿಕಾರ್ಯಕ್ಕೆ ಮೀಸಲಾಗಿದ್ದು, ತಪೋನಗರ ಮತ್ತು ಬೆಂಗಳೂರಿನಲ್ಲಿ ಧ್ಯಾನ ತರಗತಿಗಳನ್ನು ನಡೆಸುತ್ತದೆ.

## ಮಾನಸ

ಬೆಂಗಳೂರಿನಿಂದ ಇಪ್ಪತ್ತು ಕಿಲೋಮೀಟರ್ ದೂರದ ಚಿಕ್ಕಗುಬ್ಬಿ ಹಳ್ಳಿಯ ಬಳಿ ರೂಪುಗೊಳ್ಳುತ್ತಿರುವ ಧ್ಯಾನಾಭ್ಯಾಸಿಗಳ ಬಡಾವಣೆ. 1935ರಲ್ಲಿ ಅಮರರಿಗೆ ಇಲ್ಲಿ ಋಷಿಗಳ ಚಟುವಟಿಕೆಗಳ ಮತ್ತು ಭವಿಷ್ಯದಲ್ಲಿ ಸ್ಥಾಪನೆಯಾಗುವ ಬೆಳಕಿನ ನಗರದ ದರ್ಶನವಾಗಿತ್ತು. ವಿಶ್ವಚೇತನ ಮಂದಿರ, ಕುಂಡಲಿನಿ ಗೋಪುರ ಮತ್ತು ತಪೋವನ ಇಲ್ಲಿ ಧ್ಯಾನಮಾಡಲು ರೂಪುಗೊಂಡಿರುವ ವಿನೂತನ ಸ್ಥಳಗಳು. ತಪೋನಗರದ ಸುತ್ತಲೂ 'ಮಾನಸಿ' ಎಂಬ ವಿಭಿನ್ನ ಚೈತನ್ಯವಲಯವನ್ನು ನಿರ್ಮಿಸಿ, ಅದರಲ್ಲಿ ವಿಶೇಷ ಚೈತನ್ಯಗಳನ್ನು ಸಂಗ್ರಹಿಸಿಡಲಾಗಿದೆ.

## ಅಂತರ್ ಮಾನಸ

ಮಾನಸದ ಹುಟ್ಟು ಸ್ಥಳ. ಇದು ತಪೋನಗರದಿಂದ ಒಂದು ಕಿಲೋಮೀಟರ್ ದೂರದಲ್ಲಿರುವ ನಾಡಗೌಡ ಗೊಲ್ಲಹಳ್ಳಿಯ ಹತ್ತಿರ ಇದೆ. ಅಲ್ಲಿ ಗುರೂಜಿಯವರು 1987 ರಿಂದ 1992 ರವರೆಗೆ ವಾಸಮಾಡಿದ ಒಂದು ಗುಡಿಸಲು ಮತ್ತು ಇತರೆ ಕಟ್ಟಡಗಳಿವೆ.

## ಅಧ್ಯಯನ ಕೇಂದ್ರ

ಇದು ಆಧ್ಯಾತ್ಮಿಕ ಸತ್ಯಗಳ ಅಧ್ಯಯನಕ್ಕಾಗಿ ಅಂತರ್ ಮಾನಸದಲ್ಲಿ ಋಷಿಗಳ ಮಾರ್ಗದರ್ಶನದಲ್ಲಿರುವ ಒಂದು ವಿಶೇಷವಾದ ಅಧ್ಯಯನ ಕೇಂದ್ರ.

## ಜ್ಯೋತಿ ಪ್ರಾಜೆಕ್ಟ್

ಇದು ಮುಖ್ಯವಾಗಿ ಹಳ್ಳಿಯ ಮಕ್ಕಳಿಗೆ ಮೀಸಲಾದದ್ದು. ಅವರಿಗೆ ಶಾಲೆಯ ಪಾಠಗಳಲ್ಲಿ ನೆರವಾಗುವುದಲ್ಲದೆ ಶ್ಲೋಕಗಳು, ಶುಚಿತ್ವ, ಹಾಡುಗಳು, ಸಾಮಾನ್ಯಜ್ಞಾನ ಇತ್ಯಾದಿಗಳನ್ನು ಕಲಿಸಲಾಗುತ್ತದೆ. ಅಲ್ಲದೆ ಕಥೆಗಾರಿಕೆ, ಸಂಗೀತ ಮತ್ತು ಚಿತ್ರಕಲೆಗಳ ಮೂಲಕ ಅವರಲ್ಲಿನ ಸೃಜನಶೀಲತೆಯನ್ನು ವ್ಯಕ್ತಪಡಿಸಲು ಪ್ರೋತ್ಸಾಹಿಸಲಾಗುತ್ತದೆ.

## ಸಾರ್ವಜನಿಕರು

ಎಲ್ಲ ದಿನಗಳಲ್ಲೂ ಬೆಳಿಗ್ಗೆ 10ರಿಂದ 5ರ ನಡುವೆ ಧ್ಯಾನಮಾಡಲು ಇಲ್ಲಿಗೆ ಬರಬಹುದು.

## ವಿನಂತಿ

ದಯವಿಟ್ಟು ನಮ್ಮ ಸೇವಾಕಾರ್ಯಗಳಿಗೆ ನೆರವಾಗಿ. ('Manasa Foundation' ಹೆಸರಿನಲ್ಲಿ ಚೆಕ್/ಡಿಡಿ ಪಡೆಯಬಹುದು. 80–G ನಿಯಮದಡಿ ಆದಾಯ ತೆರಿಗೆಯ ರಿಯಾಯಿತಿ ಇದೆ.)

Published: 21st of Every Month. RNI. No. KARKAN/2003/13739 Regd. Postal Regn. No. KARN/BGE/1124/ 2017-2019
Date of posting Newsletter-25th or 27th or 29th of Every Month. Posted at Bangalore PSO, Bg-560026 No. of Pages-8

# ಸಾಧಕರ ಆಧ್ಯಾತ್ಮಿಕ ಅನುಭವಗಳು ಮತ್ತು ಅವರ ಪತ್ರಗಳಿಂದ ಆಯ್ದ ಭಾಗಗಳು

ಸಂ: ಶೋಭಾ ಕೆ. ರಾವ್; ಅನು: ಸ್ವರ್ಣಲತಾ

ನಾನು ಕೆಲಸಮಾಡುತ್ತಿದ್ದಾಗ ಸಣ್ಣಗೆ ಜ್ವರ ಶುರುವಾಗಿ ಮನೆಗೆ ತೆರಳುವ ವೇಳೆಗೆ ಜಾಸ್ತಿಯಾಯಿತು. ಹಿಂದೆಂದೂ ಅನುಭವಿಸಿಲ್ಲದಷ್ಟು ತಡೆಯಲಾರದ ನಡುಕ ಶುರುವಾಯಿತು. ಕಣ್ಮುಚ್ಚಿ ಗುರೂಜಿಯವರನ್ನು ನೆನೆದಾಕ್ಷಣ ಅವರ ಇರುವಿಕೆಯ ಅನುಭವವಾಯಿತು. ಅವರು ತಮ್ಮ ಕೈಯನ್ನು ನನ್ನ ಹಣೆಯ ಮೇಲಿಟ್ಟು, ಹೇಗೆ ತಂದೆ ಮಗನನ್ನು ಸಂತೈಸುವರೋ ಅಂತೆಯೇ ನನ್ನನ್ನು ಸಂತೈಸಿದರು. ನಂತರ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆದು ಸ್ವಲ್ಪ ಚೇತರಿಸಿಕೊಂಡೆ.

ಕೆಲವು ದಿನಗಳ ನಂತರ ನಾನು ಗುಣಮುಖನಾದೆ, ಆಗ ಮಾನಸದ ವಾರ್ತಾ ಪತ್ರ ನನ್ನ ಕೈ ಸೇರಿತು. ಅದರಲ್ಲಿ ಋಷಿಗಳು ಹಾಗೂ ಗುರೂಜಿಯವರು ಹೇಗೆ ಯಾವಾಗಲೂ ನಮ್ಮೊಡನಿರುತ್ತಾರೆ ಅದರಲ್ಲೂ ಅನಾರೋಗ್ಯದ ಸಮಯದಲ್ಲಿ ಹೇಗೆ ಉಪಚರಿಸುತ್ತಾರೆಂಬುದು ಬಂದಿತ್ತು. ಪ್ರತಿ ವಾರ್ತಾ ಪತ್ರದಲ್ಲೂ ನಾನು ಅನುಭವಿಸಿದ ಅಥವ ಅನುಭವಿಸುತ್ತಿರುವ ಸನ್ನಿವೇಶಕ್ಕೆ ಹೋಲುವ ವಿಷಯಗಳಿರುತ್ತವೆ. ಗುರೂಜಿಯವರು ನನಗಾಗಿಯೇ ಅದನ್ನು ಬರೆಸಿದರೇನೋ ಎಂಬಂತಿರುತ್ತದೆ.

– ವಿನಮ್ರ ಲೊಂಗಾನಿ

ಕಳೆದ ವರ್ಷ, ಜೀವನದಲ್ಲಿ ಕೆಳಗೆ ಬೀಳುವಂತಹ ಅನೇಕ ಸಂದರ್ಭಗಳಿದ್ದವು. ಆದರೆ ಬೆಳಕು ಹಾಗೂ ಈ ಮಾರ್ಗದ ಮಾರ್ಗದರ್ಶನದಿಂದ ನಾನು ಎಲ್ಲವನ್ನೂ ಆರಾಮವಾಗಿ ಎದುರಿಸಲು ಸಾಧ್ಯವಾಯಿತು. ನನಗೆ ಕಲಿಯಲು ಕಷ್ಟವಾಗಿದ್ದ ಹೊಸ ತಂತ್ರಜ್ಞಾನ ಈಗ ಸುಲಭವಾಗಿದೆ. ಕಳೆದ ಆರು ತಿಂಗಳಿಂದ ಜೀವನದಲ್ಲಿ ಅನೇಕ ಕಷ್ಟಗಳಿದ್ದರೂ ನಾನು ಸಂತೋಷವಾಗಿದ್ದೇನೆ, ಮುಂದಿನ ಉತ್ತಮ ದಿನಗಳನ್ನು ಎದುರು ನೋಡುತ್ತಿದ್ದೇನೆ.

– ಆರ್. ನೀಲಮೇಘಂ

ನಾನು ನನ್ನ ಆಸ್ತಿ ಮಾರಲು, ಮೊದಲು ವಾಸವಾಗಿದ್ದ ದೇಶಕ್ಕೆ ಹೋಗಿದ್ದೆ. ಅಲ್ಲಿ ಬಹಳ ದಿನಗಳಿಂದ ಚಿಂತೆಯುಂಟುಮಾಡುತ್ತಿದ್ದ ಕೆಲವು ವಿಷಯಗಳಿದ್ದವು, ಅವೆಲ್ಲವನ್ನೂ ಋಷಿಗಳ ಸಹಾಯದಿಂದ ನಿರ್ವಹಿಸಲು ಸಾಧ್ಯವಾಯಿತು. ನನ್ನ ಉಸಿರೇ ಬೆಳಕು, ಜೀವನವೆಲ್ಲ ಬೆಳಕೇ, ನನಗಾಗುವ ಅನುಭವಗಳೆಲ್ಲವೂ ಬೆಳಕೇ, ನಾನು ಯಾವಾಗಲೂ ಬೆಳಕಿನ ಜೊತೆಯೇ ಇರುವೆ ಎಂಬುದು ಅರಿವಿಗೆ ಬರುತ್ತಿದೆ.

– ಆ್ಯನ್ ಚ್ಯಾಪ್‌ಮನ್

ಅನೇಕ ಪರೀಕ್ಷೆಗಳಿವೆ ಎಂಬುದು ಕಾಣಿಸುತ್ತಿದೆ ಹಾಗೂ ಅನುಭವಕ್ಕೆ ಬರುತ್ತಿದೆ. ಕೆಲವದರಲ್ಲಿ ಸೋತರೆ ಕೆಲವದರಲ್ಲಿ ಗುರೂಜಿಯವರ ಕೃಪೆಯಿಂದ ಮತ್ತು ನಿಮ್ಮ ಮಾರ್ಗದರ್ಶನದಿಂದ ಜಯಸಿಕ್ಕಿದೆ. ಆದರೆ ಯಾವುದೋ ಅರಿಯದ ಕಾರಣದಿಂದ ನಾನು ನನ್ನ ಅಭ್ಯಾಸವನ್ನು ಮುಂದುವರಿಸಿ ಆಧ್ಯಾತ್ಮಿಕ ಪ್ರಗತಿ ಸಾಧಿಸಲು ದೃಢ ನಿರ್ಧಾರ ತೆಗೆದುಕೊಂಡಿದ್ದೇನೆ. ಈ ಹಾದಿಯಲ್ಲಿ ನಾನು ಇನ್ನೂ ಬಹಳ ದೂರ ಸಾಗಬೇಕೆಂಬುದನ್ನು ಪರೀಕ್ಷೆಗಳು ತಿಳಿಸುತ್ತಿವೆ.

– ಮೋಹನ್ ಚಂದ್ರಬಾನು

ಎಷ್ಟೊಂದು ಅತ್ಯಾಶ್ಚರ್ಯಕರವಾಗಿ ನನಗೀಗ ಮಾರ್ಗದರ್ಶನ ಸಿಗುತ್ತಿದೆಯೆಂದರೆ, ಅದನ್ನು ನೆನೆದು ನನಗೆ ನಾನೇ ಕೆಲ ದಿನಗಳ ಹಿಂದೆ ನಗುತ್ತಿದ್ದೆ. ವ್ಯವಹಾರದಲ್ಲಿ ಮತ್ತು ಏನನ್ನಾದರೂ ಕೊಳ್ಳಬೇಕಿರುವಂತಹ ಸಣ್ಣ ಸಣ್ಣ ವಿಷಯಗಳಲ್ಲೂ ನನಗೆ ಸಹಾಯ ದೊರೆಯುತ್ತದೆ!

– ಅಲಿಸ್ಟರ್ ಸ್ಟಬ್ಸ್

28–10–2017 ರಂದು ನಿದ್ದೆಯಲ್ಲಿ ನಾನು ಇತರ ಧ್ಯಾನಿಗಳೊಂದಿಗೆ ತಪೋನಗರದ ತರಗತಿಯಲ್ಲಿ ಹಾಜರಿದ್ದೆ. ಗುರೂಜಿಯವರು ನಮ್ಮೊಡನೆ ತಮ್ಮ ಎಂದಿನ ಉಡುಪಿನಲ್ಲಿದ್ದರು. ಗುರೂಜಿ ತರಗತಿ ಮುಗಿಸಿದ ನಂತರ ನಾನು ಅವರನ್ನು "ಗುರೂಜಿ ನೀವು ಭೌತಿಕದೇಹ ಬಿಟ್ಟಿದ್ದೀರಿ. ಆದರೆ ಈಗ ಮತ್ತೆ ನೀವು ಅದೇ ದೇಹದಲ್ಲಿದ್ದೀರ. ನನಗೆ ಗೊಂದಲವಾಗುತ್ತಿದೆ. ಇದನ್ನು ಪರಿಹರಿಸಿ," ಎಂದು ಕೇಳಿದಾಗ ಅವರು, "ನಾವೆಲ್ಲರೂ ಆ ಜೀವನವನ್ನು ಮುಗಿಸಿದ್ದೇವೆ ಮತ್ತು ಮುಂದಿನ ಜನ್ಮದಲ್ಲಿ ಸೇರಿದ್ದೇವೆ. ಗೊಂದಲಕ್ಕೊಳಗಾಗಬೇಡ," ಎಂದು ಹೇಳಿದರು. ತಕ್ಷಣ ಎಚ್ಚರವಾಗಿ ನೋಡಿದರೆ ಆಗ ಬೆಳಗಿನ ಜಾವ 2.53 ಆಗಿತ್ತು.

– ಸಿ. ಸ್ವಾಮಿನಾಥನ್

ಯಾವುದೇ ಭಯ ಹಾಗೂ ಗೊಂದಲವಿಲ್ಲದೆ ಬೆಳಕಿನೊಂದಿಗೆ ಅತ್ಯಂತ ಸಂತೋಷವಾಗಿದ್ದೇನೆ. ನಾನು ಅತ್ಯಂತ ಆರಾಮವಾಗಿದ್ದೇನೆ ಏಕೆಂದರೆ ಸಂಪೂರ್ಣವಾಗಿ ಭಗವಂತನಲ್ಲಿ ಶರಣು ಹೋಗಿದ್ದೇನೆ. ನಾನು ಬೇಕೆಂದು ಬಯಸಿದ್ದೆಲ್ಲವನ್ನೂ ನನ್ನ ಕಣ್ಣ ಮುಂದೆ ತಂದುಕೊಳ್ಳುತ್ತೇನೆ. ಭಗವಂತ ನನಗೆ ಅದನ್ನು ಒದಗಿಸಿಕೊಡುತ್ತಾನೆ. ನಾನೀಗ ಸಕಾರಾತ್ಮಕ ಮತ್ತು ಸಂತೋಷಕರ ವ್ಯಕ್ತಿಯಾಗಿದ್ದೇನೆ. ಯಾವಾಗಲೂ ಕೃತಜ್ಞತಾಭಾವದಿಂದ ಸುಖಿಯಾಗಿದ್ದೇನೆ. ಎಲ್ಲ ಕೆಲಸಗಳೂ ಸುಲಭವಾಗಿ ಕೈಗೂಡುತ್ತಿವೆ. ನನ್ನ ಸಂಬಂಧ ಎಲ್ಲರೊಡನೆ ಚೆನ್ನಾಗಿದ್ದು, ಎಲ್ಲರಲ್ಲೂ ನನ್ನ ಬಗೆಗಿರುವ ಪ್ರೀತಿ ಹಾಗೂ ಗೌರವದ ಅನುಭವವಾಗುತ್ತಿದೆ.

– ಅನು ಸೆಹಗಲ್

ತಪೋವಾಣಿ, ಕನ್ನಡ ಮಾಸಪತ್ರಿಕೆ, ವಾರ್ಷಿಕ ಚಂದಾ : ರೂ.300/–
ಸಂಪಾದಕರು, ಪ್ರಕಾಶಕರು ಮತ್ತು ಮುದ್ರಕರು : ಶ್ಯಾಮಲಾ ದೇವಿ, ತಪೋನಗರ, ಚಿಕ್ಕಗುಬ್ಬಿ, (ಹೆಣ್ಣೂರು–ಬಾಗಲೂರು ರೋಡ್) ಬೆಂಗಳೂರು ಅರ್ಬನ್ – 560 077. ಮಾನಸ ಫೌಂಡೇಶನ್ (ರಿ.) ಪರವಾಗಿ.
ಮಾಲೀಕರು : ಮಾನಸ ಫೌಂಡೇಶನ್ (ರಿ.), ತಪೋನಗರ, ಚಿಕ್ಕಗುಬ್ಬಿ, ಬೆಂಗಳೂರು ಅರ್ಬನ್ – 560 077
ಪ್ರಕಾಶನ ಸ್ಥಳ ಮಾನಸ ಫೌಂಡೇಶನ್ (ರಿ.), ತಪೋನಗರ, ಚಿಕ್ಕಗುಬ್ಬಿ, ಬೆಂಗಳೂರು ಅರ್ಬನ್ – 560 077
ಮುದ್ರಣ ಸ್ಥಳ : ಆರ್ಟ್ ಪ್ರಿಂಟ್, 719/ಎ, ವೆಸ್ಟ್ ಆಫ್ ಕಾರ್ಡ್ ರೋಡ್, 2ನೇ ಸ್ಟೇಜ್, ರಾಜಾಜಿನಗರ, ಬೆಂಗಳೂರು–560086. ಫೋನ್: 23359992
ಸಂಪಾದಕರು : ಶ್ಯಾಮಲಾ ದೇವಿ